Swabhimani Sahakari

Pages : 32 /12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 19
Issue - 04
April - 2022


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



"ಸಹಕಾರ ರಂಗದ ಕುರಿತು ಹೆಚ್ಚಿನ ಅರಿವು ಮೂಡಿಸಲು ಸಹಕಾರ ವಿಶ್ವವಿದ್ಯಾಲಯ ಆರಂಭಿಸಲಾಗುವುದು. ಸಹಕಾರ ಕ್ಷೇತ್ರವು ಸರ್ಕಾರದ ಹಸ್ತಕ್ಷೇಪ ಇಲ್ಲದೆ ಪಾರದರ್ಶಕವಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಸಹಕಾರ ನೀತಿಯನ್ನು ಜಾರಿಗೊಳಿಸುವ ಉದ್ದೇಶವಿದೆ"

"ದೇಶದಲ್ಲಿ ಸಹಕಾರ ಚಳವಳಿ ಯಶಸ್ವಿಯಾಗುವುದರ ಹಿಂದೆ ಕರ್ನಾಟಕ ರಾಜ್ಯದ ಪಾತ್ರ ಬಹುದೊಡ್ಡದಿದೆ. ಕರ್ನಾಟಕ ಸಹಕಾರ ಆಂದೋಲನವು ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ಸಾಧನೆ ಮಾಡಿದೆ"

"ಕರ್ನಾಟಕ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ"



## 2024ರಲ್ಲಿ ನೂತನ ಸಹಕಾರ ನೀತಿ ಜಾರಿಗೆ ತರಲಾಗುವುದು: ಬೆಂಗಳೂರಿನ ಸಹಕಾರ ಸಮ್ಮೇಳನದಲ್ಲಿ ಅಮಿತ್ ಶಾ ಘೋಷಣೆ

ಸೌಹಾರ್ದ ಸಹಕಾರಿಗಳ ಸಂಖ್ಯೆ : 5514

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1504



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

"ಆತ್ಮೀಯರೆ, ದಿನಾಂಕ 01.04.2022 ರಂದು ಬೆಂಗಳೂರಿನ ಅರಮನೆಯಲ್ಲಿ ನಡೆದ ಸಹಕಾರ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆದಿರುವುದಕ್ಕೆ ಮಾನ್ಯ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರರವರು ಸಹಕಾರ ಇಲಾಖೆಯ ನಿಬಂಧಕರಾದ ಶ್ರೀ ಜಿಯಾಉಲ್ಲಾರವರು ಸೇರಿದಂತೆ ಸಹಕಾರಿ ಇಲಾಖೆಯ ಎಲ್ಲ ಹಿರಿಯ ಅಧಿಕಾರಿಗಳು ಮತ್ತು ಉಳಿದ ಮಹಾಮಂಡಳಗಳ ಎಲ್ಲ ಅಧಿಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ."

# "ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ರಾಷ್ಟ್ರಮಟ್ಟದ ಮಾನ್ಯತೆಗೆ ಸಾಕ್ಷಿಯಾದ ಸಹಕಾರ ಸಮ್ಮೇಳನ" "ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಶ್ರೀ ಅಮಿತ್ ಶಾ ರವರಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಶ್ಲಾಘನೆ" ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಿದ ಎಲ್ಲರಿಗೂ ಸಂಯುಕ್ತ ಸಹಕಾರಿಯ ಧನ್ಯವಾದಗಳು.

**ರಾಜ್ಯದ ಎಲ್ಲ ಆತ್ಮೀಯ ಸಹಕಾರಿ ಬಂಧುಗಳಿಗೆ,**

ಯುಗಾದಿ ಹಬ್ಬದ ಹಾಗೂ ನೂತನ ವರ್ಷ ಶುಭಕೃತಿ ನಾಮ ಸಂವತ್ಸರದ ಹಾರ್ದಿಕ ಶುಭಾಶಯಗಳು. ರಾಷ್ಟ್ರಕವಿ ಬೇಂದ್ರೆಯವರು ಹೇಳಿದಂತೆ ಯುಗಾದಿ ಪ್ರತಿ ವರ್ಷವೂ ಬರುತ್ತದೆ. ಪ್ರತಿ ವರ್ಷ ಹೊಸತನ್ನು ತರುತ್ತದೆ. ಈ ಯುಗಾದಿ ನಮ್ಮ ನಿಮ್ಮೆಲ್ಲರ ಬಾಳಿನಲ್ಲಿ ತಂದಿರುವ ಹೊಸತನವನ್ನು ನಮ್ಮದಾಗಿಸೋಣ. ಅಭಿವೃದ್ಧಿಯತ್ತ ಸಾಗೋಣ. ಸುಖ ಶಾಂತಿ ನೆಮ್ಮದಿಯಿಂದ ಬಾಳುತ್ತ ನಮ್ಮ ನಮ್ಮ ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಪ್ರಗತಿಯತ್ತ ಸಾಗಿಸೋಣ ಅಭಿವೃದ್ಧಿಯತ್ತ ದಾಪುಗಾಲು ಹಾಕೋಣ.

ಆತ್ಮೀಯರೆ, ದಿನಾಂಕ 01.04.2022 ರಂದು ಬೆಂಗಳೂರಿನ ಅರಮನೆಯಲ್ಲಿ ನಡೆದ ಸಹಕಾರ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆದಿರುವುದಕ್ಕೆ ಮಾನ್ಯ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರರವರು ಸಹಕಾರ ಇಲಾಖೆಯ ನಿಬಂಧಕರಾದ ಶ್ರೀ ಜಿಯಾಉಲ್ಲಾರವರು ಸೇರಿದಂತೆ ಸಹಕಾರಿ ಇಲಾಖೆಯ ಎಲ್ಲ ಹಿರಿಯ ಅಧಿಕಾರಿಗಳು ಮತ್ತು ಉಳಿದ ಮಹಾಮಂಡಳಗಳ ಎಲ್ಲ ಅಧಿಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸಂಯುಕ್ತ ಸಹಕಾರಿಯ ಕಳೆದ 21 ವರ್ಷಗಳ ಪಯಣದಲ್ಲಿ 2022ರ ಏಪ್ರಿಲ್ 1ನೇ ತಾರೀಖು ಶುಕ್ರವಾರ ಐತಿಹಾಸಿಕ ಹಾಗೂ ಅವಿಸ್ಮರಣೀಯ ದಿನವಾಗಿದೆ. ಕೇಂದ್ರದ ಗೃಹ ಹಾಗೂ ಸಹಕಾರ ಸಚಿವ ಶ್ರೀ ಅಮಿತ್ ಶಾ ರವರು ಸಂಯುಕ್ತ ಸಹಕಾರಿಯ ನೂತನ ಕಟ್ಟಡ ಸೌಹಾರ್ದ ಸಹಕಾರಿ ಸೌಧವನ್ನು ವರ್ಚುಯಲ್ ಮೂಲಕ ಉದ್ಘಾಟಿಸಿದಾಗ ಸೌಹಾರ್ದ ಸಹಕಾರಿ ಕ್ಷೇತ್ರದ ಕಹಳೆ ರಾಷ್ಟ್ರಮಟ್ಟದಲ್ಲಿ ಮೊಳಗಿದಂತೆ ಭಾಸವಾಯಿತು. ಶ್ರೀ ಅಮಿತ ಶಾರವರು ತಮ್ಮ ಭಾಷಣದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದಾಗಲಂತೂ ಸೌಹಾರ್ದ ಸಹಕಾರಿಗಳ ಕೀರ್ತಿಪತಾಕೆ ದಿಗಂತದಲ್ಲಿ ಹಾರಾಡಿದಂತೆ ಭಾಸವಾಯಿತು. ಕಾರ್ಯಕ್ರಮದಲ್ಲಿ ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್ ಬೊಮ್ಮಾಯಿ, ಕೇಂದ್ರದ ಸಚಿವರಾದ ಶ್ರೀ ಪ್ರಲ್ಹಾದ ಜೋಶಿಯವರು ಕರ್ನಾಟಕ ಸರಕಾರದ ಅನೇಕ ಮಂತ್ರಿಗಳು, ಸಂಸದರು, ಸದಸ್ಯರು, ಶಾಸಕರು ಅನೇಕ ಗಣ್ಯ ಸಹಕಾರಿಗಳು ಉಪಸ್ಥಿತರಿದ್ದ ಈ ಕಾರ್ಯಕ್ರಮ ಅತ್ಯಂತ ಪರಿಣಾಮಕಾರಿಯಾದ ಕಾರ್ಯಕ್ರಮವಾಗಿತ್ತು. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ನಿರಂತರ ಪ್ರಯತ್ನದಿಂದ ಸಂಯುಕ್ತ ಸಹಕಾರಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಆಸಕ್ತಿ ವಹಿಸಿ ಮಾಡಿರುವ ಕಾರ್ಯ ಸಾಫಲ್ಯವಾಗಿದೆ.

ಈ ಸಾಧನೆ ಈ ಸಾಫಲ್ಯತೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೂ ಸೇರಿದೆ. ಆದರೆ ದಯವಿಟ್ಟು ಗಮನಿಸಿ ಸಾಧಿಸಬೇಕಾದುದು ಸಾಕಷ್ಟು ಇದೆ. ಸಾಮೂಹಿಕ ನಾಯಕತ್ವ ಯಾವಾಗಲೂ ಸಾಫಲ್ಯತೆಯನ್ನು ನೀಡುತ್ತದೆ ಎಂಬುದಕ್ಕೆ ಈ ಕಾರ್ಯಕ್ರಮ ಸಾಕ್ಷಿ. ಆದ್ದರಿಂದ ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಹೆಚ್ಚು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸೋಣ ನಮ್ಮ ಕಾರ್ಯವೈಖರಿಯನ್ನು ಇನ್ನೂ ಹೆಚ್ಚಿಸೋಣ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .......... 05–21
ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 22–27
**ಲೇಖನಗಳು :**
ಅನುಸರಿಸಿ ನಡೆಯುವುದು .......... 28
ಸಂವಿಧಾನ ಶಿಲ್ಪಿಗೆ ನಮ್ಮದೊಂದು ಸಲಾಂ .......... 30–31
ಯುಗಾದಿ ಹಬ್ಬದ ಮಹತ್ವ .......... 32

# ಸಂಪಾದಕೀಯ

## ಹೊಸ ಆರ್ಥಿಕ ವರ್ಷದಲ್ಲಿ ಸೌಹಾರ್ದ ಸಹಕಾರಿಗಳ ಜವಾಬ್ದಾರಿ ಹೆಚ್ಚಿದೆ.

ದಿನಾಂಕ 01.04.2022 ರಂದು ಅರಮನೆಯಲ್ಲಿ ನಡೆದ ರಾಜ್ಯದ ಸಹಕಾರಿ ಸಮ್ಮೇಳನ ಸೌಹಾರ್ದ ಸಹಕಾರಿಗಳ ಪಾಲಿಗೆ ಅವಿಸ್ಮರಣೀಯ ಹಾಗೂ ಐತಿಹಾಸಿಕ ಸಮ್ಮೇಳನ. ರಾಜ್ಯದ ಸೌಹಾರ್ದ ಸಹಕಾರಿಗಳು ತಾವು ಕಾರ್ಯನಿರ್ವಹಿಸುವ ಕ್ಷೇತ್ರಕ್ಕೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಮನ್ನಣೆಯನ್ನು ತಂದು ಕೊಡುತ್ತದೆ ಈ ಸಮ್ಮೇಳನ ಅಂತ ಅಂದು ಕೊಂಡಿರಲಿಲ್ಲ. ಆದರೆ ಸಂಯುಕ್ತ ಸಹಕಾರಿಯ ನಿರಂತರ ಪ್ರಯತ್ನದ ಫಲವಾಗಿ ಈ ಮನ್ನಣೆ ದೊರಕಿಸಿಕೊಳ್ಳಲು ಸಾಧ್ಯವಾಗಿದೆ ಎಂಬುದನ್ನು ರಾಜ್ಯದ ಸಹಕಾರಿಗಳು ಗಮನಿಸಬೇಕು.

ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಶ್ರೀ ಅಮಿತ್ ಶಾ ರವರು ವ್ಯಕ್ತ ಪಡಿಸಿದ ಮೆಚ್ಚುಗೆ ನಮಗೆ ಸಂತೋಷದ ಜೊತೆಗೆ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದೆ ಎಂಬುದನ್ನು ಸಹಕಾರಿಗಳು ಮರೆಯಬಾರದು. ರಾಷ್ಟ್ರದಾದ್ಯಂತ ವಿಸ್ತಾರಗೊಳ್ಳುವ ಮಾದರಿಯಾಗಿರುವ ಈ ಕ್ಷೇತ್ರದ ಬಗ್ಗೆ ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆಯುತ್ತಿವೆ. ಕೆಲವರು ಇದರ ಬಗ್ಗೆ ಸಂಶೋಧನೆ ಮಾಡುತ್ತಿದ್ದಾರೆ ಇನ್ನೂ ಕೆಲವರು ಈ ಕ್ಷೇತ್ರದ ಮೇಲೆ ಸಂಶೋಧನಾ (Ph.D) ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಇಷ್ಟು ವಿಸ್ತೃತೆಯನ್ನು ಹೊಂದುತ್ತಿರುವ ಈ ಕ್ಷೇತ್ರದಲ್ಲಿ ನಮ್ಮ ಸೌಹಾರ್ದ ಸಹಕಾರಿ ಕಾರ್ಯಕರ್ತರುಗಳಿಗೆ ಇದೊಂದು ಸವಾಲು ಹಾಗೂ ಇದೊಂದು ಬೃಹತ ಅವಕಾಶ. ಹೀಗಾಗಿ ಸೌಹಾರ್ದ ಸಹಕಾರಿಗಳಿಗೆ ಹಿಂದೆಂದಿಗಿಂತಲೂ ಈಗ ಜವಾಬ್ದಾರಿ ಹೆಚ್ಚಿದೆ ಎಂಬುದನ್ನು ಸಹಕಾರಿಗಳು ಗಮನಿಸಬೇಕು.

ಹೊಸ ಆರ್ಥಿಕ ವರ್ಷ ಪ್ರಾರಂಭವಾಗಿದೆ. ಕಳೆದ ಆರ್ಥಿಕ ಸಾಲಿನ ವರ್ಷಾಂತ್ಯದ ಲೆಕ್ಕಪತ್ರಗಳ ವ್ಯವಹಾರಗಳು ಮುಕ್ತಾಯವಾಗಿವೆ ಎಂದು ಭಾವಿಸಿದ್ದೇನೆ. ನಮ್ಮ ಸಹಕಾರಿಯ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ನಮ್ಮ ಸಹಕಾರಿಯ ಅಸ್ತಿತ್ವದ ವ್ಯಕ್ತಿತ್ವದ ಒಂದು ಸಾಮಾನ್ಯವಾದ ನೋಟ ನಮ್ಮ ಮುಂದೆ ಇದೆ. ಈ ಪಕ್ಷಿನೋಟದ ಆಧಾರದ ಮೇಲೆ ಮುಂಬರುವ ದಿನಗಳಲ್ಲಿ ನಮ್ಮ ಧ್ಯೇಯ ದೃಷ್ಟಿ ಹಾಗೂ ಮೌಲ್ಯಗಳ, ಸಂಪನ್ಮೂಲಗಳ ಕ್ರೋಢೀಕರಣ, ಸದ್ವಿನಿಯೋಗ, ಸದಸ್ಯರಿಗೆ ನೀಡಬಹುದಾದ ಎಲ್ಲ ವಿಧವಾದ ಸಾಲ ಹಾಗು ಇತರೆ ಸೌಕರ್ಯಗಳ ನಿರ್ಧಾರ ಮಾಡಬೇಕಾಗುತ್ತದೆ. ಆದ್ದರಿಂದ ಸಹಕಾರಿಗಳು ಅತ್ಯಂತ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದು ಅಗತ್ಯ.

ಈ ನಿಟ್ಟಿನಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯನ್ನು ಗುಣಾತ್ಮಕವಾಗಿ ಮುನ್ನಡೆಸುವ ಅಗತ್ಯತೆಯನ್ನು ಅರಿತು ಮುನ್ನಡೆಯುವುದು ಇಂದಿನ ಅಗತ್ಯತೆ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ. ವಿಜಯಪುರ
ಪ್ರವಚನ ಸಂಗ್ರಹ : ಶ್ರೀಮತಿ ಸವಿತ ಎನ್. ಇ.

## "ಮಾನವೀಯತೆ ವ್ಯಕ್ತಿತ್ವದ ಆಭರಣ"

ಮಾನವೀಯತೆಯು ಹಲವಾರು ವೈಶಿಷ್ಟಗಳಿಂದ ನಿರೂಪಿಸಲ್ಪಟ್ಟಿದೆ, ಅದು ಪ್ರಪಂಚದ ಗುಣಲಕ್ಷಣ ಮತ್ತು ವರ್ತನೆಯ ನಿರ್ದಿಷ್ಟ ಗುಣಗಳಾಗಿವೆ. ಈ ಗುಣಗಳಲ್ಲಿ ದಯೆ, ಇತರರ ಹಿತಕ್ಕಾಗಿ ಸ್ವಯಂ ತ್ಯಾಗ, ಉಪಕಾರ, ಪ್ರಾಮಾಣಿಕತೆ, ಸಹಾನುಭೂತಿ, ಔದಾರ್ಯ, ಗೌರವ, ನಮ್ರತೆ, ಪ್ರಾಮಾಣಿಕತೆ

ಎಂಟು ಹತ್ತು ವರ್ಷದ ಹುಡುಗನೊಬ್ಬ ತನ್ನಮ್ಮನನ್ನು ಪ್ರಶ್ನಿಸುತ್ತಿದ್ದಾನೆ. "ಅಮ್ಮ ಮಾನವೀಯತೆ ಎಂದರೇನು?" ಅಮ್ಮ ಕ್ಷಣಕಾಲ ತಬ್ಬಿಬ್ಬಾಗುತ್ತಾಳೆ. ದೊಡ್ಡ ದೊಡ್ಡ ಪದಗಳಲ್ಲಿ ಮಾನವೀಯತೆಯನ್ನು ಅರ್ಥೈಸಿ ಹೇಳಬಹುದು. ಆದರೆ ಇನ್ನೂ ಪ್ರಪಂಚದ ಜ್ಞಾನವಿಲ್ಲದ ಮುಗ್ಧ ಮಗುವಿಗೆ ಅದು ಅರ್ಥವಾಗುವುದು ಹೇಗೆ? ಮಾನವೀಯತೆಯೆಂದರೆ ಮನುಷ್ಯತ್ವ, ಮನುಷ್ಯ ಧರ್ಮ ಎಂದು ಪದಕೋಶದ ಅರ್ಥ ಹೇಳಿದರೆ ಮಗುವಿನ ಬುದ್ದಿಗೆ ತಿಳಿಯುತ್ತದೆಯೇ. ಅಮ್ಮ ಸ್ವಲ್ಪ ಹೊತ್ತು ಯೋಚಿಸಿ "ಕಂದಾ ಈಗ ನೀನು ನನಗೆ ಒಂದೇಟು ಜೋರಾಗಿ ಹೊಡೆಯಬೇಕು" ಎನ್ನುತ್ತಾಳೆ. ಬಾಲಕ ಅಮ್ಮನಿಗೆ ಹೊಡೆಯಲೋ ಬೇಡವೋ ಎಂದು ಗೊಂದಲಕ್ಕೊಳಗಾಗುತ್ತಾನೆ. ಅಮ್ಮ ಮತ್ತೆ ಕೇಳುತ್ತಾಳೆ; "ಯಾಕೆ ಹೊಡೀತಾ ಇಲ್ಲ". ನಿನಗೆ ನೋವಾಗುತ್ತಲ್ಲ ಅದಕ್ಕೆ ಹೊಡೆಯಲ್ಲ" ಎಂದ ಬಾಲಕ.

ಮಾನವೀಯತೆಯ ಅರ್ಥವನ್ನ ತಾನೀಗ ಸುಲಭವಾಗಿ ವಿವರಿಸಬಹುದೆಂದು ತಾಯಿಗೆ ಖುಷಿಯಾಯ್ತು. ಅವಳು ಮಗುವಿಗೆ ಹೇಳಿದಳು, "ನೋಡು ಮಗು ನನಗೆ ನೀನು ಹೊಡೆದರೆ ನನಗೆ ನೋವಾಗುತ್ತದೆ ಹೌದಲ್ವಾ. ನನಗೆ ನೋವಾಗುತ್ತೆ ಅಂತ ನಿನಗೆ ಗೊತ್ತಿರೋದ್ರಿಂದ ನೀನು ನನಗೆ ಹೊಡೆಯೋದಿಲ್ಲ. ಇದೇ ಮಾನವೀಯತೆ. ನೀನು ಮಾನವೀಯತೆ ಇರೋ ಒಳ್ಳೇ ಹುಡುಗ" ಎಂದಳು. ಮಗು ಖುಷಿಯಿಂದ ಆಡಲು ಹೊರಗೋಡಿತು. ಮಾನವೀಯತೆಯ ಅರ್ಥ ಎಷ್ಟೊಂದು ಸರಳವಾಗಿದೆಯಲ್ಲವೇ? ನಾವಾಡುವ ಮಾತಿನಿಂದ, ನಮ್ಮ ನಡೆಯಿಂದ ಬೇರೆಯವರಿಗೆ ನೋವಾಗುತ್ತದೆ ಎಂದು ನಾವು ತಿಳಿದುಕೊಂಡು ಆ ರೀತಿ ನಡೆದುಕೊಳ್ಳುವುದೇ ಮಾನವೀಯತೆ. ಬೇರೆಯವರಿಗೆ ನೋವಾಗುತ್ತದೆ ಎಂದು ತಿಳಿದೂ, ತಿಳಿದೂ ನಾವು ಅವರಿಗೆ ಹಿಂಸೆ ನೀಡಿದರೆ ನಮ್ಮ ನಡೆ, ನುಡಿಗಳಿಂದ ನೋಯಿಸಿದರೆ ಅದೇ ಅಮಾನವೀಯತೆ. ತತ್ವ ಎಷ್ಟೊಂದು ಸರಳವಾಗಿದೆ. ಆದರೆ ಆಚರಣೆ?

'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಣವಕ್ಕು' ಎಂದು ಸರ್ವಜ್ಞ ನುಡಿದಿದ್ದಾನೆ. ತನ್ನಂತೆಯೂ ಇನ್ನೊಂದು ಜೀವಕ್ಕೂ ನೋವಾಗುತ್ತದೆ. ಆದ್ದರಿಂದ ಗೊತ್ತಿದ್ದೂ ತಾನು ಪರರನ್ನು ನೋಯಿಸಬಾರದು ಎಂಬ ವಿವೇಕ ನಮ್ಮಲ್ಲಿ ಜಾಗೃತವಾದರೆ ನಿಜಕ್ಕೂ ನಾವು ಮಾನವರಾಗಿದ್ದಕ್ಕೆ ಸಾರ್ಥಕ ಅಲ್ಲವೇ?

ಮಾನವೀಯತೆ ಎಂಬುದು ಎಲ್ಲ ಧರ್ಮಕ್ಕಿಂತ ಮಿಗಿಲಾಗಿದ್ದು, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಮಾನವೀಯತೆ ಅಳವಡಿಸಿಕೊಳ್ಳಬೇಕು ಒಬ್ಬ ವ್ಯಕ್ತಿಯು ಸಮಾಜದಲ್ಲಿ ಅವನ ಸಾಮಾಜಿಕ ಸ್ಥಾನ, ಅವನ ಪರಿಸರ ಅಥವಾ ವಸ್ತು ಸಂಪತ್ತಿನಿಂದ ಮಾತ್ರ ನಿರ್ಧರಿಸಲ್ಪಡುವುದಿಲ್ಲ. ಜೀವನದಲ್ಲಿ ನಾವು ಪ್ರತಿಯೊಬ್ಬರೂ ನಮ್ಮದೇ ಆದ ಮಾರ್ಗಸೂಚಿಗಳನ್ನು ಮತ್ತು ತತ್ವಗಳನ್ನು ಹೊಂದಿದ್ದೇವೆ, ಅದರೊಂದಿಗೆ ನಾವು ಜೀವನದ ಮೂಲಕ ಹೋಗುತ್ತೇವೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಜೀವನದ ಸಾರವನ್ನು ಅರ್ಥಮಾಡಿಕೊಳ್ಳಲು, ಮಾನವೀಯ ಮೌಲ್ಯಗಳು ಜನರನ್ನು ಪೂರ್ಣ ಮತ್ತು ರೋಮಾಂಚಕ ಜೀವನವನ್ನು ನಡೆಸಲು ಪ್ರೇರೇಪಿಸುತ್ತದೆ. ಜೀವನದಲ್ಲಿ ನಮ್ಮ ಮೌಲ್ಯಗಳು ಏನೇ ಇರಲಿ, ಅವು ದಯೆ, ಪ್ರೀತಿ, ಗೌರವ, ತಿಳುವಳಿಕೆ ಮತ್ತು ಸಭ್ಯತೆಯನ್ನು ಆಧರಿಸಿರುವ ಮಾನವೀಯತೆ ಇರಲಿ.


## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 21298 ಆಗಿರುತ್ತದೆ. ಇವುಗಳ ಪೈಕಿ 11544 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,574

**ಮಾರ್ಚ್ ತಿಂಗಳ ಪ್ರಕರಣಗಳು :** ದಾವಾಪ್ರಕರಣ 237 ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 216.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 4261 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 680 ಪ್ರಕರಣಗಳು ಇತ್ಯರ್ಥಗೊಂಡಿದ್ದು. 3581 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಮಾರ್ಚ ತಿಂಗಳಿನಲ್ಲಿ 200 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.

# ಅರ್ಥಪೂರ್ಣ ಸಹಕಾರ ಸಮ್ಮೇಳನ : ಮೊಳಗಿದ ಸೌಹಾರ್ದ ಸಹಕಾರಿಯ ನಿನಾದ. ಕೇಂದ್ರದಲ್ಲಿ ನೂತನ ಸಹಕಾರ ಸಚಿವಾಲಯ ಪ್ರಾರಂಭವಾದ ನಂತರ ಪ್ರಥಮ ಬಾರಿಗೆ "ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಶ್ರೀ ಅಮಿತ ಶಾ ಆಗಮನ" ಸಂಯುಕ್ತ ಸಹಕಾರಿಯ ನೂತನ ಕೇಂದ್ರ ಕಛೇರಿ ಕಟ್ಟಡ ಸೌಹಾರ್ದ ಸಹಕಾರಿ ಸೌಹಾರ್ದದ ವರ್ಚುಯಲ್ ಉದ್ಘಾಟನೆ.



**ಬೆಂಗಳೂರು :** ದಿನಾಂಕ 01.04.2022 ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸಂಚಲನ ಮೂಡಿಸಿದ ಐತಿಹಾಸಿಕ ದಿನವಾಗಿದೆ. ಕೇಂದ್ರದಲ್ಲಿ ಸಹಕಾರದಿಂದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ನೂತನ ಸಹಕಾರ ಸಚಿವಾಲಯ ಪ್ರಾರಂಭವಾಗಿ ಶ್ರೀ ಅಮಿತ್ ಶಾರವರಿಗೆ ಸದರಿ ಖಾತೆಯನ್ನು ವಹಿಸಿದ ನಂತರ ಪ್ರಥಮ ಬಾರಿಗೆ ಕರ್ನಾಟಕದ ಸಮ್ಮೇಳನವನ್ನು ಉದ್ಘಾಟಿಸಲು ಬೆಂಗಳೂರಿಗೆ ಆಗಮಿಸಿದ್ದು ಸಮ್ಮೇಳನದ ಉದ್ಘಾಟನೆಯನ್ನು ನೇರವೇರಿಸಿರುವುದು, ನಂತರದಲ್ಲಿ ಸಂಯುಕ್ತ ಸಹಕಾರಿಯ ನೂತನ ಕಟ್ಟಡ ಸೌಹಾರ್ದ ಸಹಕಾರಿ ಸೌಧವನ್ನು ಉದ್ಘಾಟಿಸಿರುವುದು ಮತ್ತು ಭಾಷಣದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿ–ಕೆಗಳನ್ನು ಶ್ಲಾಘಿಸಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಅತ್ಯಂತ ಸಂತೋಷವನ್ನು ತಂದಿದೆ.

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ 21ನೇ ವರ್ಷದಲ್ಲಿ ಇಂತಹ ಮಹತ್ವದ ಸಾಧನೆ ನಡೆದಿರುವುದಕ್ಕೆ ಈ ಸಾಧನೆಗೆ ಸಹಕಾರ ನೀಡಿದ ಎಲ್ಲ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಧನ್ಯವಾದಗಳನ್ನು ಸಲ್ಲಿಸುತ್ತದೆ.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಸವರಾಜ ಎಸ್ ಬೊಮ್ಮಾಯಿ, ಕೇಂದ್ರ ಸಚಿವರಾದ ಶ್ರೀ ಪ್ರಲ್ಹಾದ ಜೋಶಿ, ಕೇಂದ್ರ ರಾಸಾಯನಿಕ ರಸಗೊಬ್ಬರ ಸಚಿವ ಶ್ರೀ ಭಗವಂತ ಖೂಬಾ, ಕೇಂದ್ರ ಕೃಷಿ ಹಾಗು ರೈತರ ಕಲ್ಯಾಣ ರಾಜ್ಯ ಸಚಿವರಾದ ಶ್ರೀಮತಿ ಶೋಭ ಕರಂದ್ಲಾಜೆ, ಕರ್ನಾಟಕ ಗೃಹ ಸಚಿವ ಶ್ರೀ ಆರಗಂ ಜ್ಞಾನೇಂದ್ರರವರು, ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರರವರು, ಕಂದಾಯ ಸಚಿವರಾದ ಶ್ರೀ ಆರ್.ಅಶೋಕರವರು, ನಗರಾಭಿವೃದ್ಧಿ ಸಚಿವರಾದ ಶ್ರೀ ಭೈರತಿ ಬಸವರಾಜರವರು, ಕೃಷಿ ಸಚಿವರಾದ ಶ್ರೀ ಬಿ.ಸಿ.ಪಾಟೀಲ್, ಪಶು ಸಂಗೋಪನಾ ಸಚಿವ ಶ್ರೀ ಪ್ರಭುಚವ್ಹಾಣ, ಕಾರ್ಮಿಕ ಸಚಿವ ಶ್ರೀ ಶಿವರಾಮ ಹೆಬ್ಬಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಶಶಿಕಲಾ ಜೊಲ್ಲೆ, ಸಂಸದರು ಹಾಗೂ ಕೇಂದ್ರದ ಮಾಜಿ ಸಚಿವರೂ ಆದ ಶ್ರೀ ಡಿ.ವಿ.ಸದಾನಂದಗೌಡ, ಸಂಸದ ಶ್ರೀ ಅಣ್ಣಾಸಾಹೇಬ ಜೊಲ್ಲೆಯವರು, ಅನೇಕ ಶಾಸಕರುಗಳು, ವಿಧಾನ ಪರಿಷತ ಸದಸ್ಯರು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಹಾಮಂಡಳದ ಅಧ್ಯಕ್ಷರೂ ಹಾಗೂ ಶಾಸಕರೂ ಆದ ಶ್ರೀ ಜಿ.ಟಿ.ದೇವೇಗೌಡ ಅನೇಕ ಹಿರಿಯ ಸಹಕಾರಿಗಳು ಸೇರಿದಂತೆ ರಾಜ್ಯಾದ್ಯಂತದಿಂದ ಬಂದಿದ್ದ 10,000ಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಕಾರ್ಯಕ್ರಮದ ಸಂಭ್ರಮವನ್ನು ಕಣ್ತುಂಬಿಸಿಕೊಂಡರು.

**ಸ್ವಾಗತ :**

ಕಾರ್ಯಕ್ರಮದ ಸ್ವಾಗತವನ್ನು ಕೆ.ಎಮ್.ಎಫ್ ಅಧ್ಯಕ್ಷರಾದ ಬಾಲಚಂದ್ರ ಜಾರಕಿಹೊಳಿಯವರು ನೆರವೇರಿಸಿದರು.

**ಶ್ರೀ ಎಸ್.ಟಿ.ಸೋಮಶೇಖರ, ಸಹಕಾರ ಸಚಿವರು :**

ರಾಜ್ಯದ ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರವರು ಕಾರ್ಯಕ್ರಮದ ಪ್ರಾಸ್ತಾವಿಕವನ್ನು ಕರ್ನಾಟಕ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರವರು ನೆರವೇರಿಸಿ ಕರ್ನಾಟಕದಲ್ಲಿ ಸಹಕಾರ ಚಳುವಳಿಯ ಸಾಧನೆಗಳನ್ನು ಪ್ರಗತಿಗಳನ್ನು ಹಾಗೂ ಮುಂಬರುವ ಯೋಜನೆಗಳನ್ನು ವಿವರಿಸಿದರು.

**ಡಾ.ಸಿ.ಎನ್ ಅಶ್ವಥ್ಥನಾರಾಯಣರವರು ಉನ್ನತ ಶಿಕ್ಷಣ ಮತ್ತು ಐಟಿಬಿಟಿ ಕೌಶಲ್ಯಾಭಿವೃದ್ಧಿ ಸಚಿವರು :**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯದ ಉನ್ನತ ಶಿಕ್ಷಣ ಮತ್ತು ಐಟಿಬಿಟಿ ಕೌಶಲ್ಯಾಭಿವೃದ್ಧಿ ಸಚಿವರಾದ ಶ್ರೀ ಡಾ. ಸಿ. ಎನ್ ಅಶ್ವಥ್ಥನಾರಾಯಣರವರು ವಹಿಸಿದ್ದರು.

**ಶ್ರೀ ಬಸವರಾಜ ಎಸ್ ಬೊಮ್ಮಾಯಿ, ಮಾನ್ಯ ಮುಖ್ಯಮಂತ್ರಿಗಳು :**

ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಮಾತನಾಡಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸರಕಾರ ಬದ್ಧವಾಗಿದೆ. ವಿಶೇಷವಾಗಿ ರೈತರಿಗೆ ಹೈನುಗಾರಿಕೆಗೆ ಬಡವರಿಗೆ ಹಿಂದುಳಿದ ವರ್ಗದವ–ರಿಗೆ ತಮ್ಮ ಸರಕಾರ ಅನೇಕ ಯೋಜನೆಗಳನ್ನು ಸಹಕಾರ ಕ್ಷೇತ್ರದ ಮೂಲಕ ಹಮ್ಮಿಕೊಂಡಿದೆ ವಿಶೇಷವಾಗಿ ನಂದೀನಿ ಕ್ಷೀರ ಸಮೃದ್ಧಿ ಬ್ಯಾಂಕ್ ಸ್ಥಾಪಿಸಲಾಗುವುದು. ಸಹಕಾರಿ ಕ್ಷೇತ್ರದ ಮೂಲಕ ಏನೆಲ್ಲ ಸಾಧಿಸಬಹುದು ಎಂಬುದನ್ನು ಹಾಲು ಮಹಾಮಂಡಳ ತೋರಿಸಿದೆ ಎಂದರು.

ಯಶಸ್ವಿನಿ ಯೋಜನೆ ಪುನಹ ಜಾರಿಗೆ 300 ಕೋಟಿರೂಗಳು ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ ಸ್ಥಾಪನೆಗೆ 100 ಕೋಟಿ ರೂಗಳನ್ನು ನೀಡಲಾಗಿದೆ ಮಹಿಳಾ ಸ್ವಸಹಾಯ ಸಂಘಗಳಿಗೆ 500 ಕೋಟಿ ನೆರವು, ಸಹಕಾರ ಸಂಸ್ಥೆಗಳ 33 ಲಕ್ಷ ರೈತರಿಗೆ ಶೂನ್ಯ ಬಡ್ಡಿದರದಲ್ಲಿ 24,000

ಕೋಟಿ ಕೃಷಿ ಸಾಲ ವಿತರಣೆಗೆ ಕ್ರಮ. ಹಾಲು ಉತ್ಪಾದಕರಿಗೆ ಪ್ರತಿ ಲೀಟರಗೆ ರೂ 5 ಅನುದಾನ ನೀಡಲು 1,050 ಕೋಟಿ ರೂ ನೀಡಲಾಗಿದೆ.

**ಶ್ರೀ ಪ್ರಲ್ಹಾದ ಜೋಶಿ ಕೇಂದ್ರ ಸಂಸದೀಯ ವ್ಯವಹಾರಗಳು ಕಲ್ಲಿದ್ದಲು ಹಾಗು ಗಣಿಖಾತೆ ಸಚಿವರು:**

ಕೇಂದ್ರ ಸಚಿವ ಶ್ರೀ ಪ್ರಲ್ಹಾದ ಜೋಶಿಯವರು ಮಾತನಾಡಿ ಕೇಂದ್ರದಲ್ಲಿ ಪ್ರಥಮ ಬಾರಿಗೆ ಸಹಕಾರ ದಿಂದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ಸಹಕಾರ ಸಚಿವಾಲಯವನ್ನು ಸ್ಥಾಪಿಸಿದ ಶ್ರೀ ಮೋದಿಜಿಯವರ ಸರಕಾರ ಸಹಕಾರ ಕ್ಷೇತ್ರದಲ್ಲಿ ಬಲವಾದ ನಂಬಿಕೆಯನ್ನು ಇಟ್ಟಿದೆ. ಅದರಲ್ಲೂ ರಾಷ್ಟ್ರದ ಹಿರಿಯ ಸಹಕಾರಿಯಾಗಿರುವ ಶ್ರೀ ಅಮಿತ ಶಾ ರವರಿಗೆ ಈ ಜವಾಬ್ದಾ–ರಿಯನ್ನು ವಹಿಸಿರುವುದು ಸಹಕಾರ ಕ್ಷೇತ್ರದ ಮೂಲಕ ನಮ್ಮ ದೇಶದ ಆರ್ಥಿಕ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ ಶ್ರೀ ಅಮಿತ ಶಾರವರು ಈಗಲೂ ಅವರ ಪ್ರತಿನಿಧಿಸುತ್ತಿರುವ ಕ್ಷೇತ್ರದ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿದ್ದಾರೆ ಎಂದು ತಿಳಿಸಿ ಅವರ ನೇತೃತ್ವದಲ್ಲಿ ಕೇಂದ್ರದ ಸಹಕಾರ ಸಚಿವಾಲಯ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು.

**ಅಮಿತ ಶಾ : ಕೇಂದ್ರ ಗೃಹ ಹಾಗೂ ಸಹಕಾರ ಸಚಿವರು :**

ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಶ್ರೀ ಅಮಿತ ಶಾ ರವರು ದೇಶದಲ್ಲಿ ಸಹಕಾರ ಕ್ಷೇತ್ರ ಔಟಡೇಟ್ ಆಗಿಲ್ಲ ಅದನ್ನು ಅಪಡೇಟ್ ಮಾಡುವ ಕಾರ್ಯ ನಡೆದಿದೆ. ದೇಶದ ರೈತನಿಗೆ ಶೇಕಡಾ 25% ಸಾಲ ಈ ಸಹಕಾರ ಕ್ಷೇತ್ರದ ಮೂಲಕ ಒದಗಿಸಲಾಗುತ್ತಿದೆ. ಕೃಷಿ ಪತ್ತಿನ ಸಹಕಾರ ಸಂಘಗಳ ಸಂಖ್ಯೆಯನ್ನು ಹೆಚ್ಚಿಸಿ ಪ್ರತಿ ಗ್ರಾಮಕ್ಕೆ ಒಂದು ಸಹಕಾರ ಸಂಘವನ್ನು ಸ್ಥಾಪಿಸಲಾಗುವುದು ಭೃಷ್ಟಾಚಾರ ತಡೆಗೆ ದೇಶವ್ಯಾಪಿ ಏಕರೂಪ ಸಾಫ್ಟವೇರ ಸ್ಥಾಪಿಸಲು ಕ್ರಮವಿಡಲಾಗುವುದು ಗುಜರಾತನ ಅಮೂಲ್ ಸಂಸ್ಥೆ ಈಗ 60,000 ಕೋಟಿ ವ್ಯಾಪಾರ ನಡೆಸುವ ಮಟ್ಟಕ್ಕೆ ಬೆಳೆದಿದೆ. ಗುಜರಾತ ಹಾಗೂ ಮಹಾರಾಷ್ಟ್ರದಂತೆ ಕರ್ನಾಟಕದಲ್ಲಿ ಸರಕಾರ ಹಾಗೂ ಸಹಕಾರ ಇಲಾಖೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಸಂತೋಷದ ವಿಷಯ. ಕರ್ನಾಟಕ ಸಹಕಾರ ವಲಯ "ಏ" ಗ್ರೇಡ್ ನಲ್ಲಿದೆ. ವಿಶೇಷವಾಗಿ ರೈತರ ಬಗ್ಗೆ ಮತ್ತು ಸಮೂಹದ ಎಲ್ಲ ವರ್ಗದವರ ಅಭಿವೃದ್ಧಿಗೆ ಗಮನ ಹರಿಸುತ್ತಿರುವುದು ಸಂತೋಷದ ವಿಷಯ. ವಿಶೇಷವಾಗಿ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು.

ದೇಶದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಕಾನೂನು, ಗ್ರಾಮೀಣ ವಿಕಾಸದಲ್ಲಿ ಸಹಕಾರ ಕ್ಷೇತ್ರದ ಅನಿವಾರ್ಯತೆ ಸೃಷ್ಟಿಯಾಗಬೇಕು, ದೇಶಾದ್ಯಂತ 75ನೇ ಅಮೃತಮಹೋತ್ಸವ ಆಚರಣೆ ಸಂದರ್ಭದಲ್ಲಿ ಹಾಲು ಉತ್ಪಾದಕರಿಗೆ ಕ್ರೆಡಿಟ್ ಕಾರ್ಡ, 2024 ರ ಹೊತ್ತಿಗೆ ಹೊಸ ಸಹಕಾರ ನೀತಿಯನ್ನು ಜಾರಿಗೆ ತರಲಾಗುವುದು. ಸಹಕಾರ ವಿಶ್ವವಿದ್ಯಾಲಯದ ಸ್ಥಾಪನೆ ಮಾಡಲಾಗುವುದು.

**ಸಂಯುಕ್ತ ಸಹಕಾರಿಯ ನೂತನ ಕಟ್ಟಡ ಸೌಹಾರ್ದ ಸಹಕಾರಿ ಸೌಧ ವರ್ಚುವಲ್ ಉದ್ಘಾಟನೆ :**




ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಶ್ರೀ ಅಮಿತ ಶಾ ರವರು ರಿಮೋಟ್ ಬಟನ್ ಒತ್ತುವುದರ ಮೂಲಕ ಸಂಯುಕ್ತ ಸಹಕಾರಿಯ ನೂತನ ಕಟ್ಟಡ ಸೌಹಾರ್ದ ಸಹಕಾರಿ ಸೌಧದ ಉದ್ಘಾಟನೆಯನ್ನು ನೆರವೇರಿಸಿದರು. ಉದ್ಘಾಟನೆಯ ನಂತರ ನೂತನ ಕಟ್ಟಡವನ್ನು ವಿಡಿಯೂ ಮೂಲಕ ಪ್ರದರ್ಶಿಸಲಾಯಿತು.

**ಶ್ರೀ ಅಮಿತ ಶಾ ರವರಿಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿ ವತಿಯಿಂದ ಸನ್ಮಾನ :**



ಕರ್ನಾಟಕ ಸಹಕಾರ ಸಮ್ಮೇಳನದಲ್ಲಿ ಭಾಗವಹಿಸಲು ಆಗಮಿಸಿದ್ದ ಶ್ರೀ ಅಮಿತ ಶಾರವರಿಗೆ ಕರ್ನಾಟಕದ ಸೌಹಾರ್ದ ಸಹಕಾರಿಗಳ ಪರವಾಗಿ ರಾಜ್ಯ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರು ಹಾರ ಹಾಕಿ ಶಾಲು ಹೊದಿಸಿ ಮೊಮೆಂಟೂ ನೀಡಿ ಸನ್ಮಾನಿಸಿದರು.

**ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವಿಡಿಯೂ ಪ್ರದರ್ಶನ:**

ರಾಜ್ಯದ ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ಪಕ್ಷಿನೋಟವನ್ನು ವಿಡಿಯೂ ಮೂಲಕ ಪ್ರರ್ಶಿಸಲಾಯಿತು. ಇದರಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಹುಟ್ಟು ಬೆಳವಣಿಗೆ ಕಾಯ್ದೆಯ ಆಶಯ, ಧ್ಯೇಯ ಧೋರಣೆಗಳು ಮತ್ತು ಪ್ರಚಲಿತ ಕಾರ್ಯಚಟುಬಟಿಕೆಗಳನ್ನು ಪ್ರದಶಿಸಲಾಯಿತು.

**ವಂದನಾರ್ಪಣೆ :**

ಶ್ರೀ ಬಿ.ಸಿ. ಪಾಟೀಲ್, ಮಾನ್ಯ ಕೃಷಿ ಸಚಿವರು ಕರ್ನಾಟಕ ಸರಕಾರ ಇವರು ನೆರವೇರಿಸಿದರು.

# ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಸೇರಿದಂತೆ ರಾಜ್ಯದ 8 ಸೌಹಾರ್ದ ಸಹಕಾರಿಗಳು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು

## 60 ಸಹಕಾರಿಗಳಿಗೆ 68ನೇ ಅಖಿಲಭಾರತ ಸಹಕಾರ ಸಪ್ತಾಹದ "ಸಹಕಾರ ರತ್ನ ಪ್ರಶಸ್ತಿ" ಗೌರವ



**ಬೆಂಗಳೂರು :** ದಿನಾಂಕ 20.03.2022ರಂದು ಬೆಂಗಳೂರು ನಗರದ ಕೆಂಗೇರಿ ಉಪನಗರದ ಗಣೇಶ ಆಟದ ಮೈದಾನದಲ್ಲಿ ಬೆಳಿಗ್ಗೆ 11.00 ಕ್ಕೆ 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಸಹಕಾರ ರತ್ನ ಪ್ರಶಸ್ತಿ ಪ್ರಧಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು . ಕಾರ್ಯಕ್ರಮವನ್ನು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್ ಬೊಮ್ಮಾಯಿಯವರು ನೇರವೇರಿಸಿದರು. ಅಧ್ಯಕ್ಷತೆಯನ್ನು ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗೃಹ ಸಚಿವ ಶ್ರೀ ಆರಗ ಜ್ಞಾನೇಂದ್ರ, ಮಾಜಿ ಮುಖ್ಯ ಮಂತ್ರಿಗಳು, ಕೇಂದ್ರ ಸಚಿವರೂ ಹಾಗೂ ಹಾಲಿ ಸಂಸದರೂ ಆಗಿರುವ ಶ್ರೀ ಸದಾನಂದಗೌಡರವರು, ಬೃಹತ ಮತ್ತು ಮಧ್ಯಮ ನೀರಾವರಿ ಸಚಿವರು, ಶ್ರೀ ಗೋವಿಂದ ಕಾರಜೋಳ, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರೂ ಆಗಿರುವ ಶ್ರೀ ಡಾ. ಕೆ. ಸುಧಾಕರರವರು, ನಗರಾಭಿವೃದ್ಧಿ ಸಚಿವರಾದ ಶ್ರೀ ಭೈರತಿ ಬಸವರಾಜ, ಪರಿಸರ ಹಾಗೂ ಜೀವಶಾಸ್ತ್ರ ಹಾಗೂ ಪ್ರವಾಸೋದ್ಯಮ ಸಚಿವ ಶ್ರೀ ಆನಂದಸಿಂಗ್ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಶ್ರೀ ಗೋಪಾಲಯ್ಯನವರು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್.ಆರ್.ಉಮಾಶಂಕರರವರು ಹಾಗೂ ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಜಿಯಾಉಲ್ಲಾ ರವರುಗಳು ಅನೇಕ ಸಹಕಾರಿ ಗಣ್ಯರು 7 ರಿಂದ 8 ಸಾವಿರ ರಾಜ್ಯದ ಸಹಕಾರಿಗಳು ಭಾಗವಹಿಸಿದ್ದರು.

### ಸಹಕಾರ ಕ್ಷೇತ್ರದ ಸಾಧನೆ ಸಾಕಷ್ಟಿದೆ. ಸಾಧಿಸಬೇಕಾದುದು ಬಹಳಷ್ಟಿದೆ. ಸ್ವಾಗತ ಹಾಗೂ ಪ್ರಾಸ್ತಾವಿಕದಲ್ಲಿ ಶ್ರೀ ಜಿ.ಟಿ.ದೇವೇಗೌಡ

ಕಾರ್ಯಕ್ರಮದ ಅತಿಥಿ ಗಣ್ಯರ ಹಾಗೂ ಎಲ್ಲ ಸಹಕಾರಿಗಳ ಸ್ವಾಗತ ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿದ ಶಾಸಕರು ಹಾಗೂ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆಗಿರುವ ಶ್ರೀ ಜಿ.ಟಿ.ದೇವೇಗೌಡರವರು ಮಾತನಾಡಿ ಕೋವಿಡ್‌ನಿಂದಾಗಿ ಕಳೆದ 2 ವರ್ಷಗಳಿಂದ ಸಹಕಾರ ಕ್ಷೇತ್ರದಲ್ಲಿ ಸಾರ್ವಜನಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಲಿಲ್ಲ. ಪ್ರಸ್ತುತ 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ನೀಡಬೇಕಿದ್ದ ಸಹಕಾರ ರತ್ನ ಪ್ರಶಸ್ತಿಯನ್ನು ಸಹಕಾರಿಗಳಿಗೆ ನೀಡಿ ಗೌರವಿಸಬೇಕಿದೆ. ಹೀಗಾಗಿ ಈ ಕಾರ್ಯಕ್ರಮವವನ್ನು ಹಮ್ಮಿಕೊಳ್ಳಲಾಗಿದೆ. ಇದೇ ಸಂದರ್ಭದಲ್ಲಿ ಸಹಕಾರ ಕ್ಷೇತ್ರದ ಸಾಧನೆಗಳನ್ನು ಜನರ ಅವಗಾಹನೆಗೆ ತರುವುದು ಒಂದು ಪ್ರಮುಖ ಉದ್ದೇಶವಾಗಿದೆ. ಈ ದೇಶದಲ್ಲಿ 8.5 ಲಕ್ಷ ವಿವಿಧ ರೀತಿಯ ಸಹಕಾರ ಸಂಘಗಳಿವೆ. 31 ಕೋಟಿ ಜನರು ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ 46 ಸಾವಿರ ವಿವಿಧ ರೀತಿಯ ಸಹಕಾರ ಸಂಘಗಳಿವೆ 2.1 ಕೋಟಿ ಸದಸ್ಯರಿದ್ದಾರೆ. 5 ಲಕ್ಷ ಜನರಿಗೆ ಉದ್ಯೋಗವನ್ನು ನೀಡಿರುವ ಈ ಕ್ಷೇತ್ರ ನಮ್ಮ ದೇಶದ ಜನರ ಜೀವನ ಪದ್ಧತಿಯಾಗಿ ಬೆಳೆದಿದೆ. ಜೊತೆಗೆ ಕೆಲವು ಪ್ರಮುಖ ಸಮಸ್ಯೆಗಳಾದ ಮುದ್ರಾಂಕ ಶುಲ್ಕ ವಿನಾಯಿತಿ, ಸಹಕಾರಿ ಪಧವಿಧರರಿಗೆ ಸಹಕಾರಿ ಬ್ಯಾಂಕ ಮತ್ತು ಸಹಕಾರಿ ಇಲಾಖೆಗಳಲ್ಲಿ ಉದ್ಯೋಗ ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಪ್ರಾಧಿಕಾರ, ಮುಂತಾದವುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವುದರ ಜೊತೆಗೆ ಅವುಗಳ ಪರಿಹಾರಕ್ಕೆ ಕ್ರಮವಿಡಲು ವಿನಂತಿಸಲಾಗುತ್ತಿದೆ. ಸಹಕಾರ ಕ್ಷೇತ್ರದ ಸಾಧನೆ ಸಾಕಷ್ಟಿದೆ ಆದರೆ ಸಕಾರಾತ್ಮ ಪ್ರಚಾರ ಈ ಕ್ಷೇತ್ರಕ್ಕೆ ಸಿಗುತ್ತಿಲ್ಲ. ಸಾಧಿಸಬೇಕಾದುದು ಬಹಳಷ್ಟಿದೆ ಎಂದು ತಿಳಿಸಿ ಎಲ್ಲರಿಗೂ ಸ್ವಾಗತ ಕೋರಿದರು.

### ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ ಸ್ಥಾಪನೆ. : ಶ್ರೀ ಬಸವರಾಜ ಎಸ್ ಬೊಮ್ಮಾಯಿ

ಕಾರ್ಯಕ್ರಮದ ಉದ್ಘಾಟನೆ ನೇರವೇರಿಸಿದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಸವರಾಜ ಎಸ್ ಬೊಮ್ಮಾಯಿಯವರು ಸಹಕಾರ ಕ್ಷೇತ್ರ ಸಾರ್ವಜನಿಕರ ಸೇವೆ ಮಾಡಲು ಅತ್ಯಂತ ಉತ್ತಮವಾದ ಕ್ಷೇತ್ರ. ವಿಶೇಷವಾಗಿ ಬಡವರ ರೈತರ ಮತ್ತು ಹಿಂದುಳಿದ ವರ್ಗದವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಸಾಧನವಾಗಿ ಕಾರ್ಯನಿರ್ವಹಿಸುತ್ತ ಬಂದಿದೆ. ದೇಶದ ಆರ್ಥಿಕ ಅಭಿವೃದ್ಧಿಗೆ ಮಹತ್ವದ ಕಾಣಿಕೆಯನ್ನು ನೀಡುತ್ತ ಬಂದಿದೆ. ಈ ಕ್ಷೇತ್ರದಲ್ಲಿ ಅನೇಕರು ದುಡಿದು ಈ ಕ್ಷೇತ್ರವನ್ನು ಬೆಳೆಸಿದ್ದಾರೆ ಅವರುಗಳನ್ನು ಗುರುತಿಸಿ ಗೌರವಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ ಎಂದು ತಿಳಿಸಿದರು. ರಾಜ್ಯದಲ್ಲಿ ಅತೀ ಶೀಘ್ರದಲ್ಲಿ ರೈತರಿಗೆ ಮತ್ತು ಹೈನುಗಾರಿಕೆ ಉದ್ಯೋಗದಲ್ಲಿ ತೊಡಗಿಸಿಕೊಂಡವರಿಗಾಗಿ "ಸಮೃದ್ಧಿ ಸಹಕಾರ ಬ್ಯಾಂಕ್" ಸ್ಥಾಪಿಸಲು ರಾಜ್ಯ ಸರಕಾರ 100 ಕೋಟಿ ರೂ ನೀಡಲಿದೆ. ಶಾಸಕರ ನಿಧಿಯಿಂದ ಸಹಕಾರ ಸಂಸ್ಥೆಗಳಿಗೆ ಅನುದಾನ ನೀಡಲು ಅಗತ್ಯ ಸುತ್ತೋಲೆಯನ್ನು ಹೊರಡಿಸಲು ಕ್ರಮವಿಡಲಾಗುವುದು ಮಹಿಳೆಯರಿಗಾಗಿ ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘಗಳ ಸ್ಥಾಪನೆಗೆ ಕ್ರಮವೀಡಲಾಗುವುದು ಸಹಕಾರ ರಂಗ ಸಹಕಾರಿಯಾಗಿಯೇ ಉಳಿಯಬೇಕು ಇದು ಬಂಡವಾಳ ಶಾಹಿ ಮತ್ತು ಸಮಜಾವಾದದ ನಡುವಿನ ಸುವರ್ಣ ಮಾರ್ಗ ಎಂದು ತಿಳಿಸಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಶಾಲು, ಮೈಸೂರು ಟೋಪಿ, ಹಾರ, ಪ್ರಶಸ್ತಿ ಪತ್ರ ಹಾಗೂ ಬಂಗಾರದ ಪದಕ ನೀಡಿ ಗೌರವಿಸಿದರು.

**ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳು ಜನಪರ ಅಭಿವೃದ್ಧಿಪರ : ಶ್ರೀ ಎಸ್.ಟಿ.ಸೋಮಶೇಖರ**

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರರವರು ಮಾತನಾಡಿ ಸಹಕಾರ ಇಲಾಖೆ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರ ಕ್ಷೇತ್ರದ ಮೂಲಕ ರಾಜ್ಯದ ರೈತರ ಹಾಗೂ ಹಿಂದುಳಿದ ವರ್ಗದವರ, ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ವಿಶೇಷವಾಗಿ ಪ್ರಸಕ್ತ ಸಾಲಿನಲ್ಲಿ ಸಹಕಾರ ಇಲಾಖೆಯ ಮೂಲಕ ರಾಜ್ಯದ 33 ಲಕ್ಷ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ರೂ 23,000 ಕೋಟಿ ರೂಗಳ ಸಾಲ, ಹಾಲು ಉತ್ಪಾದಕರಿಗೆ ಪ್ರತಿ ಲೀಟರಿಗೆ ರೂ.5 ಪ್ರೋತ್ಸಾಹ ಧನ ನೀಡಲಾಗುವುದು ಎಂದು ತಿಳಿಸಿದರು. ಕಳೆದ ವರ್ಷ ಕೋವಿಡ್ ಕಾರಣದಿಂದ ಸಹಕಾರಿ ಕ್ಷೇತ್ರದಲ್ಲಿ ದುಡಿದವರಿಗೆ ಸಾಧನೆ ಮಾಡಿದವರಿಗೆ ಪುರಸ್ಕಾರ ಮಾಡಲು ಸಾಧ್ಯವಾಗಿರಲಿಲ್ಲ. ಈಗ ಕೊವೀಡ್ ಅರ್ಭಟ ಕಡಿಮೆಯಾಗಿದೆ. ಜನಜೀವನ ಸಹಜ ಸ್ಥಿತಿಗೆ ಬಂದಿದೆ. ಹೀಗಾಗಿ ಈ ಕಾರ್ಯಕ್ರಮ ಹಮ್ಮಿಕೊಂಡು ಜನರಿಗೆ ಸಹಕಾರ ಕ್ಷೇತ್ರದ ಸಾಧನೆಗಳನ್ನು ತಿಳಿಯ ಪಡಿಸುವ ಜೊತೆಗೆ ಸಹಕಾರಿ ಕ್ಷೇತ್ರದ ಪ್ರಗತಿಯ ವೇಗವನ್ನು ಹೆಚ್ಚಿಸುವುದಕ್ಕಾಗಿ ಮತ್ತು ಈ ಕ್ಷೇತ್ರದಲ್ಲಿ ದುಡಿದವರಿಗೆ ಗೌರವಿಸುವುದಕ್ಕಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಯಿತು ಎಂದು ತಿಳಿಸಿದರು.

**ಸೌಹಾರ್ದ ಸಹಕಾರಿಗಳಿಗೆ ಸಹಕಾರಿ ರತ್ನ ಪ್ರಶಸ್ತಿ :**



ಸಹಕಾರ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದವರನ್ನು ಗುರುತಿಸಿದವರಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸಾಧನೆ ಮಾಡಿದವರೆಂದು ಗುರುತಿಸಲಾಗಿದೆ. ಅವರುಗಳಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಹಿರಿಯ ಸಹಕಾರಿ ಶಿವಮೊಗ್ಗ ಗ್ರಾಹಕ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಹೆಚ್.ಎಸ್.ಮಂಜಪ್ಪ, ಯಡಗೆರೆ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಯಡಗೆರೆ ಸುಬ್ರಮಣ್ಯ, ಯಶಸ್ವಿನಿ ಸೌಹಾರ್ದ ಸಹಕಾರಿಯ ಅಧ್ಯಕ್ಷೆ ಶ್ರೀಮತಿ ಬಿ.ಎನ್.ನಾಗಮಣಿ, ಶ್ರೀ ಚಂದ್ರಕಾಂತ ಸೋಮಶೇಖರ ಕೋಠಿವಾಲೆ, ಶಿರಸಿ ಕದಂಬ ಮಾರ್ಕೆಟಿಂಗ ಸೌಹಾರ್ದ ಸಹಕಾರಿ ಅಧ್ಯಕ್ಷ ಶ್ರೀ ಶಂಭುಲಿಂಗ ಗಣಪತಿ ಹೆಗಡ, ವಿಜಯಪುರದ ಶ್ರೀ ಬಾಲಚಂದ್ರ ನಾಗಪ್ಪ ಮುಂಜಾನೆ, ಬಳ್ಳಾರಿಯ ಶ್ರೀ ಎಲ್.ಎಸ್. ಆನಂದರವರುಗಳಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

**ಇದೇ ಸಂದರ್ಭದಲ್ಲಿ ಕರ್ನಾಟಕದ ಮೇರು ನಟ "ದಿ. ಪುನೀತ ರಾಜಕುಮಾರ (ಅಪ್ಪು) ಗೆ ಮರಣೋತ್ತರ ಸಹಕಾರ ರತ್ನ ಪ್ರಶಸ್ತಿ" ನೀಡಲಾಗುತ್ತಿದೆ ಎಂದು ಘೋಷಿಸಲಾಯಿತು**

**ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರವರಿಂದ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಪ್ರದರ್ಶನ ಹಾಗೂ ಪುಸ್ತಕಗಳ ಮಾರಾಟ ಮಳಿಗೆ ಉದ್ಘಾಟನೆ :**



ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರರವರು ಸಂಯುಕ್ತ ಸಹಕಾರಿಯ ವತಿಯಿಂದ ಏರ್ಪಡಿಸಿದ್ದ ಪ್ರದರ್ಶನ ಹಾಗು ಮಾರಾಟ ಮಳಿಗೆಯನ್ನು ಉದ್ಘಾಟಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಚಟುವಟಿಕೆಗಳನ್ನು ವೀಕ್ಷೀಸಿದರು. ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಶ್ರೀಮತಿ ಅರುಣಾ ಕೃಷ್ಣಾರೆಡ್ಡಿಯವರು, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಸುದ್ದಿ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತೀಕರರವರು ಶ್ರೀ ವಿ.ಎಸ್. ಗುಂಡೂರಾವರವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಹಾಗೂ ಅನೇಕ ಸಹಕಾರಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅನೇಕ ಸಹಕಾರಿ ಗಣ್ಯರು, ಸಹಕಾರ ಇಲಾಖೆಯ ಅಧಿಕಾರಿಗಳು ಸಹಕಾರಿಗಳು ಸಾರ್ವಜನಿಕರು ಮಳಿಗೆಗೆ ಭೇಟಿ ನೀಡಿದರು.

## ಸಹಕಾರ ರತ್ನ ಪ್ರಶಸ್ತಿ ಪಡೆದ ವಿವಿಧ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು








# ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ತುಮಕೂರಿನ ಶ್ರೀ ಸಿದ್ಧಗಂಗಾ ತಾಂತ್ರಿಕ ವಿದ್ಯಾಲಯ (ಎಸ್.ಐ.ಟಿ) ಕಾಲೇಜಿನಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ

## ಬಾಳಿನ ಉಸಿರು ಸಹಕಾರ : ಸಹಕಾರವಿರದೇ ಬಾಳಿಲ್ಲ : ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ನಿಮ್ಮ ಆತ್ಮಸಾಕ್ಷಿಯಾಗಿ ಸಂಸ್ಥೆಯ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸಿ : – ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು, ಸಿದ್ಧಗಂಗಾಮಠ, ತುಮಕೂರು




ಉದ್ಘಾಟನೆ ಹಾಗೂ ಸಹಕಾರ ರತ್ನ ಪ್ರಶಸ್ತಿ ಪಡೆದ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರಿಗೆ ಸಿಬ್ಬಂದಿಗಳಿಂದ ಸನ್ಮಾನ

**ತುಮಕೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿಯವರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ 26, 27 ಮಾರ್ಚ 2022 ರಂದು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ದೀಪ ಬೆಳಗಿಸಿ ಮಾತನಾಡಿದ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿದ್ದ ಶ್ರೀ ಸಿದ್ದಲಿಂಗ ಮಹಾಸ್ವಾಮಿಜಿ ಸಿದ್ಧಗಂಗಾಮಠ ಸ್ವಾಮೀಜಿಯವರು ಯವರು ಸಹಕಾರ ಪ್ರತಿಯೊಬ್ಬರ ಬಾಳಿನ ಉಸಿರು. ಸಹಕಾರ ವಿಲ್ಲದೆ ಬಾಳೆ ಇಲ್ಲ. ಸಹಕಾರ ಸಂಸ್ಥೆಗಳು ಸಮಾಜದ ಅಭಿವೃದ್ಧಿ ಕಾರ್ಯದಲ್ಲಿ ಆರ್ಥಿಕ ನೆರವು ನೀಡುವ ಕಾರ್ಯವನ್ನು ಮಾಡುತ್ತಿವೆ. ಈ ಸಂಸ್ಥೆಗಳಿಗೆ ಮಾರ್ಗದರ್ಶನ ಮಾಡುವ ಸಂಸ್ಥೆ ನಿಮ್ಮದಾಗಿದ್ದು ಎಲ್ಲ ಸಿಬ್ಬಂದಿಯವರು ಆತ್ಮಸಾಕ್ಷಿಯಾಗಿ ಪ್ರಾಮಾಣಿಕತೆಯಿಂದ ಮತ್ತು ನಿಷ್ಠೆಯಿಂದ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾ–ರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ಪ್ರತಿವರ್ಷವೂ ಈ ರೀತಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಅವರ ಕಾರ್ಯದಕ್ಷತೆಯನ್ನು ಹಾಗೂ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತ ಬಂದಿದೆ. ಸಿಬ್ಬಂದಿಯವರು ಸಂಯುಕ್ತ ಸಹಕಾರಿಯ ದಂಡನಾಯಕರಿದ್ದಂತೆ. ಹೆಚ್ಚು ಕ್ರೀಯಾಶೀಲತೆಯಿಂದ ಕಾರ್ಯನಿರ್ವಹಿಸಿದಲ್ಲಿ ಸಂಸ್ಥೆಯ ಉತ್ತಮವಾಗಿ ಕಾರ್ಯನಿರ್ವಹಿಸಲಯ ಸಾಧ್ಯ. ಮತ್ತು ಸಿಬ್ಬಂದಿಯ ವ್ಯಕ್ತಿತ್ವವೂ ವಿಕಸನಗೊಳ್ಳುತ್ತದೆ. ಎಂದು ತಿಳಿಸಿ ಕಳೆದ 5 ವರ್ಷಗಳ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಸಾಧನೆಗಳ ಬಗ್ಗೆ ವಿವರಗಳನ್ನು ನೀಡಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಪ್ರಾರಂಭದಲ್ಲಿ ಶ್ರೀಮತಿ ಅಶ್ವಿನಿ ಹಾಗೂ ಶ್ರೀಮತಿ ಪ್ರತಿಭಾ ಮಠ ಮತ್ತು ಶ್ರೀಮತಿ ರೇಶ್ಮಾ ಪಾಟೀಲ್ ಇವರಿಂದ ಪ್ರಾರ್ಥನೆಯಾದ ನಂತರ ಸಂಂ–ಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಅತಿಥಿಗಣ್ಯರನ್ನು ಹಾಗೂ ಪ್ರತಿನಿಧಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನು ಹೇಳುತ್ತ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ಪ್ರತಿ ವರ್ಷದಂತೆ ಈ ಬಾರಿಯೂ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಈ ಬಾರಿಯ ತರಬೇತಿ ಕಾರ್ಯಕ್ರಮ ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ ಏಕಂದರೆ ಈ ಬಾರಿಯ ತರಬೇತಿ ಒಂದು ಪುಣ್ಯ ಕ್ಷೇತ್ರದಲ್ಲಿ, ಶೈಕ್ಷಣಿಕ ಪರಿಸರದಲ್ಲಿ ಉತ್ತಮ ವ್ಯವಸ್ಥೆಗಳನ್ನು ಒಳಗೊಂಡಿರುವುದು ವಿಶೇಷ. ಈ ತರಬೇತಿಯ ಪ್ರಯೋಜನ ಪೂರ್ಣ ಪಡೆದುಕೊಂಡು ನಿಮ್ಮೆಲ್ಲರ ಕಾರ್ಯಕ್ಷಮತೆ ಹೆಚ್ಚಿಸಿಕೊಳಲು ಇದು ಸದಾವಕಾಶವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಗಂಗಾಧರಯ್ಯನವರು ಹಾಗು ಎಸ್.ಐ.ಟಿ. ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗದ ಕಾನೂನು ಅಧಿಕಾರಿ ಶ್ರೀ ಸೂರ್ಯಕಾಂತ ರ್‍ಯಾಕಲೆ ಸಲ್ಲಿಸಿದರು. ಬೆಂಗಳೂರು ಪ್ರಾಂತೀಯ ಅಧಿಕಾರಿ ಶ್ರೀ ಸಂಜಯ ಕೊರಟಕರರವರು ಕಾರ್ಯಕ್ರಮದ ನಿರ್ವಹಣೆಯನ್ನು ಮಾಡಿದರು.

ಡಾ.ನಂದೀಶ ಹಿರೇಮಠ, ಕಾರ್ಪೋರೇಟ್ ಟ್ರೇನರ್, ಬೆಂಗಳೂರು, ಶ್ರೀಮತಿ ಮೀನಾಕ್ಷಿ ಖಂಡಿಮಠ, ಸಮಾಜಶಾಸ್ತ್ರ ಮುಖ್ಯಸ್ಥರು, ತುಮಕೂರು ವಿಶ್ವವಿದ್ಯಾಲಯ ಇವರುಗಳು ಪ್ರೇರೇಪಣೆ ಮತ್ತು ಆಂತರಿಕ ಸಂಬಂಧಗಳ ನಿರ್ವಹಣೆ ಮತ್ತು ಮಾನವೀಯ ಮೌಲ್ಯಗಳ ನಿರ್ವಹಣೆಗಳ ಬಗ್ಗೆ ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗದ ಟಾಸ್ಕ ಫೋರ್ಸ ಅಧಿಕಾರಿ ಶ್ರೀ ಶ್ರೀಕಾಂತ ಬರುವೆ ಹಾಗೂ ಬೆಂಗಳೂರು ವಿಭಾಗದ ಟಾಸ್ಕ ಫೋರ್ಸ ಅಧಿಕಾರಿ ಶ್ರೀ ನಾರಾಯಣ ಹೆಗಡೆ ಇವರುಗಳು ಟಾಸ್ಕ ಫೋರ್ಸನ ಕಾರ್ಯನಿರ್ವಹಣೆ, ಕೇಂದ್ರ ಕಛೇರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂಧನ ಮತ್ತು ವ್ಯವಸ್ಥಾಪಕರಾದ ಶ್ರೀ ಪಾಲರಾಜ ಇವರು ಕಚೇರಿಯ ಕಾರ್ಯನಿರ್ವಹಣೆ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.

ಪಾಟೀಲರವರು ಸಂಯುಕ್ತ ಸಹಕಾರಿಯ ವಿಷನ್ 2025 ವಿಷಯವಾಗಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರ ಕಾರ್ಯನಿರ್ವಹಣೆ ಬಗ್ಗೆ ಉಪನ್ಯಾಸಗಳನ್ನು ನೀಡಿದರು. ಕಾರ್ಯಕ್ರಮ ಅತ್ಯಂತ ಉತ್ತಮವಾಗಿತ್ತು ಪರಿಣಾಮಕಾರಿಯಾಗಿತ್ತು ಎಂದು ಶಿಬಿರಾರ್ಥಿಗಳು ತಮ್ಮ ಅಭಿಪ್ರಾಯ ತಿಳಿಸಿದರು. ಶ್ರೀ ಶಿವಕುಮಾರ ಬಿರಾದಾರರವರು ವಂದನಾರ್ಪಣೆ ಮಾಡಿದರು.

ನಂತರದಲ್ಲಿ ಎಲ್ಲರೂ ಶ್ರೀ ಸಿದ್ಧಗಂಗಾಮಠಕ್ಕೆ ಭೇಟಿ ನೀಡಿ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮಿಜಿಯವರ ಗದ್ದುಗೆಯ ದರ್ಶನ ಪಡೆದರು ಶ್ರೀಮಠದ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾದರು.

## ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



**ಬೆಂಗಳೂರು** : ಸಂಯುಕ್ತ ಸಹಕಾರಿ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ದಿನಾಂಕ 12.03.2022ರಂದು "ಸೌಹಾರ್ದ ಸಹಕಾರಿ ಸೌಧ", 17 & 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ನಿರೂಪಣೆಯನ್ನು ಸಂಯುಕ್ತ ಸಹಕಾರಿಯ ಕಿರಿಯ ವ್ಯವಸ್ಥಾಪಕಿಯಾದ ಶ್ರೀಮತಿ ಕವಿತರವರು ನೆರವೇರಿಸಿಕೊಟ್ಟರು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿ., ದ ಮಾನ್ಯ ಅಧ್ಯಕ್ಷರಾದ ಶ್ರೀಮತಿ ಸವಿತಾ ವಿ ಅಮರಶೆಟ್ಟಿ, ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ, ಶ್ರೀಮತಿ ಹೆಚ್ ಜಿ ಶೋಭಾ, ಸಂಪಾದಕರು, ಪ್ರಕಾಶಕರು, ಸ್ತ್ರೀ ಜಾಗೃತಿ ಪತ್ರಿಕೆ ಹಾಗೂ ಸಮಾಜ ಸೇವಕರು ಹಾಗೂ ಶ್ರೀಮತಿ ಅರುಣಾ ಕೃಷ್ಣಾರೆಡ್ಡಿ, ಮಾನ್ಯ ನಿರ್ದೇಶಕರು, ಸೌಹಾರ್ದ ಇನ್ಫೋಟೆಕ್ ಪ್ರೈವೆಟ್ ಲಿ., ಹಾಗೂ ಶ್ರೀಮತಿ ಭಾರತಿ ಸಿಂಗ್, ಸ್ಥಾಪಕರು ಮತ್ತು ಮುಖ್ಯಸ್ಥರು, ಸಾ-ಮುದ್ರ ಫೌಂಡೇಷನ್, ಮತ್ತು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ ಎಸ್‌ಗುಂಡೂರಾವ್‌ಇವರು ಭಾಗವಹಿಸಿದ್ದರು.

**ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ ಅವಶ್ಯಕ : ಶ್ರೀ ಶರಣಗೌಡ ಜಿ. ಪಾಟೀಲ್**

ಪ್ರಾರ್ಥನೆಯನ್ನು ಕು. ಅರ್ಪಿತಾ ಶಾನ್‌ಬೋಗ್ ಇವರು ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಅತಿಥಿ ಗಣ್ಯರ ಸ್ವಾಗತ ಹಾಗೂ ಪರಿಚಯವನ್ನು ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶೋಭಾರವರು ನಡೆಸಿಕೊಟ್ಟರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನಡೆಸಿಕೊಟ್ಟು ಮಹಿಳಾ ಸಬಲೀಕರಣವಾಗಲಿ ಅಥವಾ ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ ವಿಷಯಗಳು ಪ್ರಸ್ತುತ ಹೆಚ್ಚು ಮಹತ್ವವನ್ನು ಪಡೆಯುತ್ತವೆ. ಏಕೆಂದರೆ ನಾವು ಆಧುನಿಕ ಜಗತ್ತಿನಲ್ಲಿದ್ದೇವೆ. ಪೈಪೋಟಿಯಿಂದ ಜೀವನ ನಡೆಸಬೇಕಿದೆ. ಈ ಸಂದರ್ಭದಲ್ಲಿ ಪುರುಷರು ಹಾಗೂ ಮಹಿಳೆಯರು ಒಟ್ಟಾಗಿ ಸುಸ್ಥಿರತೆಯಿಂದ ಈ ಜೀವನದ ರಥವನ್ನು ನಡೆಸಬೇಕಿದೆ. ಹಾಗಾಗಿ ಇದಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಎಲ್ಲರೂ ನೀಡಲೇಬೇಕಾದ ಸಂದರ್ಭ ಇದಾಗಿದೆ.

**ಮಹಿಳೆಯರಿಗೆ ಅನಂತ ಶಕ್ತಿ ಇದೆ : ಶ್ರೀ ಸವಿತಾ ಅಮರನಾಥ ಶೆಟ್ಟಿ**

ಅತಿಥಿ ಗಣ್ಯರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಅಮರನಾಥ ಶೆಟ್ಟಿಯವರು ಮಹಿಳೆಯರಿಗೆ ಅನಂತ ಶಕ್ತಿ ಇದೆ. ಎಲ್ಲ ರಂಗದಲ್ಲೂ ಅನೇಕ ಮಹಿಳಾ ಸಾಧಕೀಯ-ರಿದ್ದಾರೆ. ಮಹಿಳೆಯರ ಶೋಷಣೆ ರಹಿತ ಸಮಾಜ ನಿರ್ಮಾಣಕ್ಕೆ ನಾವೆಲ್ಲ ಶ್ರಮಪಡೋಣ ಮಹಿಳೆ ಅಬಲೆ ಎಂಬ ಪಟ್ಟವನ್ನು ತೆಗೆದು ಹಾಕಲು ನಾವೆಲ್ಲ ಕೈ ಜೋಡಿಸೋಣ ಎಂದು ತಿಳಿಸಿದರು.

**ಆತ್ಮ ನಿರ್ಭರ ಭಾರತ ನಿರ್ಮಾಣದಲ್ಲಿ ಮಹಿಳೆಯರದು ಸಾಕಷ್ಟು ಮಹತ್ವದ ಪಾತ್ರವಿದೆ. : ಶ್ರೀಮತಿ ಹೆಚ್.ಜಿ.ಶೋಭಾ**

ಸ್ತ್ರೀ ಜಾಗೃತಿ ಪತ್ರಿಕೆಯ ಸಂಪಾದಕಿ ಹಾಗೂ ಕಾರ್ಯಕ್ರಮದ ಮುಖ್ಯ ಅತಿಥಿ ಶ್ರೀಮತಿ ಹೆಚ್.ಜಿ. ಶೋಭರವರು ಮಾತನಾಡಿ ಮಹಿಳೆಯರು ಕೇವಲ ಮಹಿಳಾ ಕಾರ್ಯಕ್ರಮಗಳಿಗೆ ಸೀಮಿತವಾಗದೇ ದೇಶ ಪ್ರೇಮ ಬೆಳೆಸುವಲ್ಲಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಲು ಮುಂದಾದಾಗ ಲಿಂಗ ಸಮಾನತೆ ತಾನೆ ತಾನಾಗಿ ಬೆಳೆಯುತ್ತದೆ. ಈ ಆಚರಣೆ ಮಹಿಳಾ ಅಭಿವೃದ್ಧಿಯ ಅವಲೋಕನಾ ದಿನವನ್ನಾಗಿ ಪರಿಗಣಿಸಿ. ನಾವು ಏನೆಲ್ಲ ಕಾರ್ಯಗಳನ್ನು ಮಾಡಬಹುದು ಎಂಬ ಬಗ್ಗೆ ಚಿಂತನೆಗಳನ್ನು ನಡೆಸಿ ಎಂದು ಕರೆಕೊಟ್ಟರು.

**ಮಹಿಳೆ ಅಬಲೆಯಲ್ಲ ಅವಳಿಗೆ ಪ್ರೋತ್ಸಾಹ ಅವಶ್ಯಕ : ಶ್ರೀಮತಿ ಅರುಣಾ ಕೃಷ್ಣಾರೆಡ್ಡಿ**

ಸೌಹಾರ್ದ ಸಹಕಾರಿ ಇನ್‌ಫೋಟೆಕ್ ಕಂಪನಿಯ ನಿರ್ದೇಶಕರಾದ

ಶ್ರೀಮತಿ ಅರುಣಾ ಕೃಷ್ಣಾರೆಡ್ಡಿಯವರು ಮಾತನಾಡಿ ಮಹಿಳೆ ಯಾವತ್ತಿಗೂ ಅಬಲೆಯಲ್ಲ. ಅವಕಾಶ ವಂಚಿತಳಾಗಿ ಮುಂದೆ ಬರುವ ಸ್ವಭಾವ ಬೆಳೆಸಿಕೊಂಡಿರುವುದಿಲ್ಲ. ಅವಳಿಗೆ ಪ್ರೋತ್ಸಾಹ ನೀಡಿದಲ್ಲಿ ಅವಳು ಸಾಕಷ್ಟು ತೊಡಗಿಸಿಕೊಳ್ಳಲು ಮುಂದಾಗುತ್ತಾಳೆ. ಅವಕಾಶ ಉಪಯೋಗಿಸಿ ಸಾಧನೆ ಮಾಡಿರುವ ಅನೇಕ ಮಹಿಳೆಯರ ಉಧಾಹತಣೆಗಳಿವೆ ಎಂದು ತಿಳಿಸಿದರು.

**ಅವಕಾಶ ವಂಚಿತರಾಗಬೇಡಿ. ಮುಂದೆ ಬನ್ನಿ : ಶ್ರೀ ಬಿ.ಎಸ್.ಗುಂಡೂರಾವ**

ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ ಎಸ್. ಗುಂಡೂರಾವ್ ಇವರು ಮಹಿಳೆಯರು ತಾವೇ ತಾವಾಗಿ ಮುಂದೆ ಬರುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಸಬಲೀಕರಣ ಕಾರ್ಯಕ್ರಮ ಯಶಸ್ವಿಯಾಗಿಸಿ. ಇವತ್ತು ಮಹಿಳೆಯರು ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರೋಗ್ಯ ಕ್ಷೇತ್ರದಲ್ಲಿ, ಆಧುನಿಕ ತಂತ್ರಜ್ಞಾನ ಉಪಯೋಗದಲ್ಲಿ ಸಾಕಷ್ಟು ಪರಿಣಿತೆಯನ್ನು ಪಡೆದಿದ್ದಾರೆ ಅದು ಸಮಾಜ ಮುಖಿಯಾಗುವಂತೆ ಕಾರ್ಯನಿರ್ವಹಿಸಿದಲ್ಲಿ ಮಹಿಳಾ ಸಬಲೀಕರಣಕ್ಕೆ ಮತ್ತು ಲಿಂಗ ಸಮಾನತೆ ಬೆಳೆಸುವಲ್ಲಿ ಸಹಕಾರಿ ಯಾಗುತ್ತದೆ ಎಂದು ತಿಳಿಸಿದರು.

**ಮಹಿಳೆಯರು ಮೀಸಲಾತಿ ಅಪೇಕ್ಷಿಸಬಾರದು : ಶ್ರೀಮತಿ ಸರಸ್ವತಿ ಎನ್. ರವಿ.**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ ಇವರು ಅಧ್ಯಕ್ಷೀಯ ಭಾಷಣವನ್ನು ಮಾಡುತ್ತ ಮಹಿಳೆಯರು ಯಾವ ಕ್ಷೇತ್ರದಲ್ಲೂ ಮೀಸಲಾತಿ ಅಪೇಕ್ಷಿಸಬಾರದು. ನಮ್ಮ ಸ್ವಂತ ಪ್ರತಿಭೆಯಿಂದ ಸ್ವ-ಶಕ್ತಿಯ ಸಂಘಟನೆಯ ಬಲದಿಂದ ಮುಂದೆ ಬರಬೇಕು. ಎಲ್ಲವನ್ನು ಸಾಧನೆ ಮಾಡಲು ಈಗಿನ ಸಮಾಜದಲ್ಲಿ ಸಾಕಷ್ಟು ಅವಕಾಶಗಳಿವೆ. ಯಾವುದು ನಮ್ಮನ್ನು ಹುಡುಕಿಕೊಂಡು ಬರುವುದಿಲ್ಲ. ನಾವು ಪ್ರಯತ್ನ ಪಟ್ಟು ಅವುಗಳನ್ನು ಹುಡುಕಿಕೊಂಡು ಹೋದಾಗ ಯಶಸ್ಸು ನಮ್ಮದಾಗುತ್ತದೆ. ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆಗೆ ಅರ್ಥ ಬರುತ್ತದೆ ಎಂದು ತಿಳಿಸಿದರು. ಮಹಿಳೆಯರು ಸದಾ ಕ್ರಿಯಾಶೀಲರು. ಅದಮ್ಯ ಚೇತನರು. ಅಸಾಧಾರಣ ಅನಗತ್ಯ ಅವಶ್ಯಕತೆಗಳ ಹಿಂದೆ ಓಡದೇ ನಮ್ಮ ಪ್ರಗತಿಗಾಗಿ ನಮ್ಮ ಒಳಿತಿಗಾಗಿ ಬದಲಾಗೋಣ ಎಂದು ತಿಳಿಸಿದರು.

**ಮಹಿಳೆಯರು ಖಿನ್ನರಾಗಬೇಡಿ (ಡಿಪ್ರೆಸ್) ಆಗಬೇಡಿ : ಶ್ರೀಮತಿ ಭಾರತಿ ಸಿಂಗ**

ಕಾರ್ಯಕ್ರಮದಲ್ಲಿ ಸಾ-ಮುದ್ರಾ ಫೌಂಡೇಶನ್ ಸಂಸ್ಥಾಪಕರು ಹಾಗೂ ಅಧ್ಯಕ್ಷರಾದ ಶ್ರೀಮತಿ ಭಾರತಿ ಸಿಂಗ ಇವರು ಮಾತನಾಡಿ ಮಹಿಳೆಯರಲ್ಲಿ ಪ್ರಮುಖವಾಗಿ ನಾಚಿಕೆ, ಖಿನ್ನತೆ ಮತ್ತು ಕೀಳರಿಮೆ ಸ್ವಭಾವದವರಿರುತ್ತಾರೆ ಹಾಗಾಗದಂತೆ ನಮ್ಮ ಚಟುವಟಿಕೆಗಳು ಬದಲಾಗಬೇಕು. ಮುಂದೆ ಬರುವ ಸ್ವಭಾವ ಬೆಳೆಸಿಕೊಳ್ಳುವುದು ಅಗತ್ಯ. ಮಹಿಳೆಯರು ಸಾಧಕೀಯರಾಗಿರುವ ಅನೇಕ ಉದಾಹರಣೆಗಳು ನಮ್ಮ ಕಣ್ಮುಂದೆ ಇವೆ. ಇದಕ್ಕೆಲ್ಲ ಮುಖ್ಯ ಕಾರಣ ಅನಗತ್ಯವಾಗಿ ಟಿ.ವಿ. ನೋಡುವ ಹವ್ಯಾಸ ಕಡಿಮೆ ಮಾಡುವುದು ಉತ್ತಮ. ಅನಗತ್ಯವಾಗಿ ದೂರವಾಣಿಗಳನ್ನು ಉಪಯೋಗಿಸುವುದನ್ನು ನಿಯಂತ್ರಿಸಿ ಮಕ್ಕಳ ಆರೋಗ್ಯ, ವಿದ್ಯಾಭ್ಯಾಸ, ಕೌಟುಂಬಿಕ ಹಾಗೂ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸಲು ಮತ್ತು ಸಂಸ್ಕಾರಯುತ ಚಟವಟಿಕೆಗಳಿಗೆ ಹೆಚ್ಚು ಸಮಯ ನೀಡುವುದನ್ನು ರೂಢಿಸಿಕೊಳ್ಳುವುದು ಅವಶ್ಯಕ ಎಂದು ತಿಳಿಸಿದರು.

**ಅಮ್ಮ ಪದಕ್ಕೆ ಓಂಕಾರ ಪದಕ್ಕಿಂತಲೂ ಹೆಚ್ಚಿನ ಶಕ್ತಿ ಇದೆ : ಶ್ರೀಮತಿ ಮೀನಾಕ್ಷಿ ಖಂಡಿಮಠ**

ತುಮಕೂರು ವಿಶ್ವ ವಿದ್ಯಾಲಯದ ರಾಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಶ್ರೀಮತಿ ಮೀನಾಕ್ಷಿ ಖಂಡಿಮಠ ಇವರು ಮಾತನಾಡಿ ಸಬಲತೆಯ ಪರ್ಯಾಯ ವ್ಯವಸ್ಥೆಯೆ ಸ್ತ್ರೀ, ಶಿಸ್ತು ಶಾಂತಿ ಸರಳತೆ ಸಹನೆಯ ಪ್ರತೀಕ ಸ್ತ್ರೀ. ನಮ್ಮ ದೇಶದ ಹೆಸರು ಭಾರತ. ಅಂದರೆ ಜ್ಞಾನವನ್ನು ಪ್ರೀತಿಸುವುದು .ಅಮ್ಮ ಅಂದರೆ ಮಾತೃಶಕ್ತಿ. ತಾಯಿ. ಒಂದು ಹೆಣ್ಣು ಮಾತ್ರ ತಾಯಿಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲಳೇ ಹೊರತು ಆ ಮಾತೃತ್ವದ ಮನಸ್ಸು ಮತ್ತು ಶಕ್ತಿ ಬೇರೆಯವರಿಗೆ ಬರುವುದು ಸಾಧ್ಯವಿಲ್ಲ. ಅಮ್ಮ ಎಂಬ ಪದ ಓಂಕಾರ ಪದಕ್ಕಿಂತಲೂ ಹೆಚ್ಚಿನ ಶಕ್ತಿಯುತ ಪದವಾಗಿದೆ. ಮಹಿಳೆಯರು ಭಾರತೀಯ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಿ. ಆಚರಣೆಯಲ್ಲಿ ತನ್ನಿ. ಮನಃಶಕ್ತಿ ವೈಚಾರಿಕತೆ ಆತ್ಮಶಕ್ತಿಯನ್ನು ಬೆಳೆಸಿಕೊಳ್ಳಿ ಇಂದು ನಾವು ಪಾಶ್ಚಾತ್ಯ ರಾಷ್ಟ್ರಗಳ ಥಳಕು ಬಳಕುಗಳಿಗೆ ಮಾರುಹೋಗಿದ್ದೇವೆ. ನಮ್ಮತನವನ್ನು ಮರೆಯಲಾರಂಭಿಸಿದ್ದೇವೆ. ಅದಾಗಲು ಅವಕಾಶ ಕೊಡುವುದು ಬೇಡ. ನಮ್ಮ ಹಕ್ಕುಗಳ ರಕ್ಷಣೆಗೆ ಹೋರಾಟ ಮಾಡೋಣ ನಮ್ಮ ಕೊರತೆಗಳ ನಿವಾರಣೆಗಳಿಗೆ ಯೋಜನಾ ಬದ್ಧವಾಗಿ ಕಾರ್ಯನಿರ್ವಹಿಸೋಣ ನಮ್ಮದು ಕರ್ತವ್ಯಪರ ರಾಷ್ಟ್ರವಾಗಿದೆ. ನಾವು ಹೆಚ್ಚು ಕರ್ತವ್ಯ ಶೀಲರಾಗೋಣ ಎಂದು ಕರೆ ನೀಡಿದರು.

ಮಧ್ಯಾಹ್ನದ ಅಧಿವೇಶನವನ್ನು ಡಾ. ದಾಕ್ಷಾಯಿಣಿಯವರು ಮಹಿಳೆಯರ ಆರೋಗ್ಯದ ಬಗ್ಗೆ ಯೋಗದ ಮಹತ್ವ ಮತ್ತು ಕೆಲವು ಆರೋಗ್ಯ ವಿಚಾರಗಳನ್ನು ಮತ್ತು ಮಹಿಳೆ ಮತ್ತು ಕಾನೂನು ಕುರಿತಂತೆ ವಕೀಲರಾದ ಶ್ರೀಮತಿ ರಾಧಾಜೋಷಿ ಇವರು ವಿವರಗಳನ್ನು ನೀಡಿದರು.

ಸಮಾರೋಪ ಭಾಷಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನೇರವೇರಿಸುತ್ತ ಕಾರ್ಯಕ್ರಮದಲ್ಲಿ ಎಲ್ಲ ಮಹಿಳೆಯರು ಕ್ರಿಯಾಶೀಲರಾಗಿ ಭಾಗವಹಿಸಿರುವುದಕ್ಕೆ ಸಂಯುಕ್ತ ಸಹಕಾರಿಯ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಸೌಹಾರ್ದ ಸಹಕಾರಿಗಳಿಂದ 85 ಜನ ಮಹಿಳೆಯರು ಬಾಗವಹಿಸಿದ್ದರು

ಕಾರ್ಯಕ್ರಮ ಅತ್ಯಂತ ವ್ಯವಸ್ಥಿತವಾಗಿ ನಡೆದಿದೆ. ಉತ್ತಮ ವಿಷಯಗಳ ಬಗ್ಗೆ ಉತ್ತಮ ಮಹಿಳಾ ಸಾಧಕೀಯರಿಂದ ವಿಷಯಗಳ ಪ್ರಸ್ತಾವನೆಗಳು ಆಗಿವೆ ಎಂದು ಪ್ರತಿನಿಧಿಗಳು ಸಂತೋಷ ವ್ಯಕ್ತ ಪಡಿಸಿದರು.

ಬೆಳಗಿನ ಕಾರ್ಯಕ್ರಮದ ನಿರೂಪಣೆಯನ್ನು ಕಿರಿಯ ಸಹಾಯಕಿ ಶ್ರೀಮತಿ ಕವಿತಾರವರು ಮಧ್ಯಾಹ್ನದ ಕಾರ್ಯಕ್ರಮವನ್ನು ಶ್ರೀ ದಿವ್ಯಾರವರು ನಿರೂಪಿಸಿದರು. ಕೊನೆಯಲ್ಲಿ ಶ್ರೀಮತಿ ಅನಿತಾರವರು ವಂದನಾರ್ಪಣೆ ಸಲ್ಲಿಸಿದರು.



**ಕಲಬುರಗಿ :** ದಿನಾಂಕ 10-03-2022 ರಂದು ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ಮತ್ತು ಸರಕಾರಿ ಮಹಾವಿದ್ಯಾಲಯ ಕಲಬುರಗಿ ಇವರ ಸಹಯೋಗದೊಂದಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸರಕಾರಿ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಶ್ರೀ ಡಾ॥ ಪಂಡಿತ ಬೆಳಮಗಿ ಮುಖ್ಯಸ್ಥರು, ವಾಣಿಜ್ಯಶಾಸ್ತ್ರ ವಿಭಾಗ ಸರಕಾರಿ ಮಹಾವಿದ್ಯಾಲಯ ಕಲಬುರಗಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಶ್ರೀ ವೈ.ಟಿ ಪಾಟೀಲ ಹಾಗೂ ಶ್ರೀಮತಿ ಪ್ರೋ. ಜಯಶ್ರೀ. ವಿ ದಂಡೆ, ವಿಶ್ರಾಂತ ಪ್ರಧ್ಯಾಪಕರು, ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ. ಮತ್ತು ಶ್ರೀ ಮಾಲತಿ. ಎಸ್ ರೆಶ್ಮಿ ಹಿರಿಯ ನ್ಯಾಯವಾದಿಗಳು ಕಲಬುರಗಿ ಇವರುಗಳು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್‌ರವರು ನುಡಿದರು. ಸ್ವಾಗತವನ್ನು ಮಾನ್ಯ ಶ್ರೀಮತಿ ಡಾ॥ ಇಂದುಮತಿ ಪಾಟೀಲ ಮುಖ್ಯಸ್ಥರು, ಇತಿಹಾಸ ವಿಭಾಗ, ಸರಕಾರಿ ಮಹಾವಿದ್ಯಾಲಯ ಕಲಬುರಗಿ ಇವರು ಉಪಸ್ಥಿತರಿದ್ದರು. ಶ್ರೀಮತಿ ಡಾ॥ ಕೆ.ಸಿ ಮೀನಾಕ್ಷಿ ಸಹ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಸರಕಾರಿ ಮಹಾವಿದ್ಯಾಲಯ ಕಲಬುರಗಿ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 210 ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



**ಮೈಸೂರು :** ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಮತ್ತು ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳಲ್ಲಿ ಕಾರ್ಯನಿರ್ವಹಿಸುವ ಮಹಿಳಾ ನಿರ್ದೇಶಕರು ಮತ್ತು ಸಿಬ್ಬಂದಿಗಳಿಗಾಗಿ ದಿನಾಂಕ 12.03.2022ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಮೈಸೂರು ಲೋಕಲ್ ಸೆಂಟರ್), ಎಸ್.ಪಿ. ಭಟ್ ಹಾಲ್, ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಮಾಲತಿ ಬಿ. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್‌ರವರು ವಹಿಸಿದ್ದರು. ವಿಶೇಷ ಆಹ್ವಾನಿತರಾಗಿ ಅರಣ್ಯ ಮತ್ತು ವಿಹಾರ ಧಾಮ ಅಧ್ಯಕ್ಷರಾದ ಶ್ರೀ ಅಪ್ಪಣ್ಣರವರು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಚಿಕ್ಕಮ್ಮ ಬಸವರಾಜು, ಮಾನ್ಯ ಅಧ್ಯಕ್ಷರು, ಬಾಲ ಭವನ, ಕರ್ನಾಟಕ ಸರ್ಕಾರ ಹಾಗೂ ಅತಿಥಿಗಳಾಗಿ ಡಾ॥ ಆರ್. ಹೆಚ್. ಪವಿತ್ರ ಸಹಪ್ರಾಧ್ಯಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಡಾ॥ ಎಂ. ಮೀರಾ, ಸಹ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಡಾ॥ ಎಂ. ಶಾರದಾ, ಪ್ರಾಂಶುಪಾಲರು, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಮತ್ತು ಶ್ರೀಮತಿ ಡಾ॥ ಕೆ.ಎಂ. ಲಾವಣ್ಯ ಪ್ರಭ, ಕವಯತ್ರಿ ಮೈಸೂರು ಇವರು ಉಪಸ್ಥಿತರಿದ್ದರು. ಸ್ವಾಗತ ಮತ್ತು ಪ್ರಾಸ್ತವಿಕ ನುಡಿಯನ್ನು ಶ್ರೀ ಶಿವಕುಮಾರ ಬಿರಾದಾರ, ಪ್ರಾಂತೀಯ ವ್ಯವಸ್ಥಾಪಕರು, ನಡೆಸಿಕೊಟ್ಟರು. ಶ್ರೀ ಸುರೇಶ್ ಆರ್.ಎಸ್. ರವರು ಕಾರ್ಯಕ್ರಮದ ವಂದಾನಾರ್ಪಣೆ ಸಲ್ಲಿಸಿದರು.

ನಂತರದಲ್ಲಿ ನಡೆದ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಡಾ॥ ಆರ್.ಹೆಚ್. ಪವಿತ್ರರವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಮಹಿಳಾ ಅಭಿವೃದ್ಧಿ ಯೋಜನೆಗಳು, ಡಾ॥ ಎಂ. ಮೀರಾರವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಧ್ಯೇಯ ಮತ್ತು ಮಹಿಳಾ ಸಬಲೀಕರಣ ಹಾಗೂ ಡಾ॥ ಎಂ. ಶಾರದಾರವರು ಮಹಿಳೆ ಅಂದು-ಇಂದು-ಮುಂದು ಕುರಿತು ಉಪನ್ಯಾಸವನ್ನು ನೀಡಿದರು. ನಂತರ ಸಂವಾದ ಕಾರ್ಯಕ್ರಮವನ್ನು ಶ್ರೀಮತಿ ಡಾ॥ ಆರ್. ಹೆಚ್. ಪವಿತ್ರ, ಡಾ॥ ಶಾರದ ಎಂ, ಹಾಗೂ ಪ್ರಾಂತೀಯ ವ್ಯವಸ್ಥಾಪಕರು, ಜಿಲ್ಲಾ ಸಂಯೋಜಕರ ನೇತೃತ್ವದಲ್ಲಿ ಸಂವಾದ ಕಾರ್ಯಕ್ರಮವನ್ನು ನಡೆಸಲಾಯಿತು.

ಸದರಿ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ರೇಣುಕ ಎಂ.ವಿ. ರವರು ಮಾಡಿದರು. ಕಾರ್ಯಾಗಾರದಲ್ಲಿ ಒಟ್ಟು 62 ಸೌಹಾರ್ದ ಸಹಕಾರಿಯಿಂದ 119 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ನಂತರದಲ್ಲಿ ಮಹಿಳೆಯರಿಗೆ ಸಂಯುಕ್ತ ಸಹಕಾರಿಯಿಂದ ಬ್ಯಾಗ್ ಅನ್ನು ವಿತರಿಸಲಾಯಿತು.



**ಬೆಳಗಾವಿ :** ದಿನಾಂಕ 11.03.2022ರ ಶುಕ್ರವಾರದಂದು ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತೀಯ ಕಛೇರಿಯ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ಮಹಾಂತ ಭವನ ಮಹಾಂತೇಶ ನಗರ ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಪಿ.ವಿ.ಸ್ನೇಹಾ, ಮಾನ್ಯ ಉಪ ಪೋಲಿಸ್ ಆಯುಕ್ತರು, ಅಪರಾಧ ಮತ್ತು ಸಂಚಾರ ವಿಭಾಗ, ಬೆಳಗಾವಿ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಸರಸ್ವತಿ ಎನ್. ರವಿ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಲಕ್ಷ್ಮಣ ಮಾರುತಿ ಪವಾರ, ಮಾನ್ಯ ವೃತ್ತಿಪರ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀಮತಿ ವೀಣಾ ಜಗದೀಶ ಕವಟಗಿಮಠ, ಮಾನ್ಯ ಸದಸ್ಯರು, ನಗರಸಭಾ ಚಿಕ್ಕೋಡಿ, ಶ್ರೀಮತಿ ಮಂಗಲಾ ಮೆಟಗುಡ್ಡ, ಮಾನ್ಯ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ ಬೆಳಗಾವಿ, ಶ್ರೀಮತಿ ಶಾಂಭವಿ ಅಶ್ವತ್‌ಪುರ್, ಮಾನ್ಯ ಅಧ್ಯಕ್ಷರು, ಬಿಜೆಪಿ ಮಹಿಳಾ ಮೋರ್ಚ ಚಿಕ್ಕೋಡಿ ಜಿಲ್ಲೆ ಹಾಗೂ ಸೇವಿಕಾ, ರಾಷ್ಟ್ರ ಸೇವಿಕಾ ಸಮಿತಿ, ಡಾ॥ ಲಕ್ಷ್ಮೀ ಕೇದಾರೇಶ್ವರ, ಸಹಾಯಕ ಪ್ರಾಧ್ಯಾಪಕರು, ಒಬಿಜಿ ವಿಭಾಗ ಬಿಮ್ಸ್ ಬೆಳಗಾವಿ, ಶ್ರೀಮತಿ ರಶ್ಮೀ ಭಾಸ್ಕರ್ ದೇಶಪಾಂಡೆ, ಸೇವಿಕಾ, ರಾಷ್ಟ್ರ ಸೇವಿಕಾ ಸಮಿತಿ ಹಾಗೂ ಮಾನ್ಯ ಅಧ್ಯಕ್ಷರು ಘೀರವಾಣಿ ಟ್ಯುಟೋರಿಯಲ್ಸ್ ಬೆಳಗಾವಿ, ಇವರುಗಳು ಭಾಗವಹಿಸಿದ್ದರು.

ಸದರಿ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವನ್ನು ಶ್ರೀ ಶ್ರೀಕಾಂತ ಬರುವೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು, ಟಾಸ್ಕ ಪೋರ್ಸ ವಿಭಾಗ, ಬೆಳಗಾವಿ ಮತ್ತು ಕಲಬುರಗಿ ಪ್ರಾಂತ, ಇವರು ನಡೆಸಿಕೊಟ್ಟರು,

ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಸರಸ್ವತಿ ಎನ್. ರವಿ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಇವರು "ಮಹಿಳೆಯರಲ್ಲಿ ಇರುವ ಅದ್ಭುತ ಶಕ್ತಿಯ ಪರಿಚಯ" ಎನ್ನುವ ವಿಷಯದ ಕುರಿತು ಉಪನ್ಯಾಸ ನೀಡಿದರು. ತದನಂತರ ವೈದ್ಯಕೀಯ ಕ್ಷೇತ್ರದಲ್ಲಿ ಮಹಿಳೆ ಮತ್ತು ಮಹಿಳೆ ಅನುಬವಿಸುತ್ತಿರುವ ಆರೋಗ್ಯ ತೊಂದರೆಯ ಬಗ್ಗೆ ಶ್ರೀಮತಿ ಡಾ॥ ಲಕ್ಷ್ಮೀ ಕೇದಾರೇಶ್ವರ, ಇವರು ಉಪನ್ಯಾಸ ನೀಡಿದರು. ಹಾಗೂ ಕೊನೆಯ ಅವಧಿಯಲ್ಲಿ ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ ಎಂಬ ಧ್ಯೇಯ ವಾಕ್ಯದ ಕುರಿತು ಕಾರ್ಯಕ್ರಮದಲ್ಲಿ ಶ್ರೀಮತಿ ರಶ್ಮೀ ದೇಶಪಾಂಡೆ ಇವರು ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ಭಾರತ ಸರ್ಕಾರದ ಪ್ರತಿಷ್ಠಿತ ಪುರಸ್ಕಾರ "ನಾರಿ ಪ್ರಶಸ್ತಿ" ಪಡೆದ ಶ್ರೀಮತಿ ಶೋಭಾ ಗಸ್ತಿ ಅವರಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಶ್ರೀಮತಿ ನಾಗರತ್ನ ಎಸ್, ಮಾನ್ಯ ಅಧ್ಯಕ್ಷರು ಆಶ್ರಯ ಫೌಂಡೇಶನ್, ಶ್ರೀಮತಿ ವೈಜಯಂತಿ ಚೌಗಲಾ, ಮಾನ್ಯ ಅಧ್ಯಕ್ಷರು ಮಹೇಶ್ವರಿ ಫೌಂಡೇಶನ್ ಹಾಗೂ ಶ್ರೀಮತಿ ನಂದಾ ನಾಯಕ, ಗೌರವ ಕಾರ್ಯದರ್ಶಿ ಯಶಸ್ವಿನಿ ಶಿಕ್ಷಣ ಸಂಸ್ಥೆ ಈ ಗಣ್ಯ ಮಾನ್ಯರುಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಗವರವಿಸಿ ಸನ್ಮಾನಿಸಲಾಯಿತು.

ಹಲವಾರು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ, ಸಾಂಸ್ಕೃತಿಕ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ವಿವಿಧ ಸಹಕಾರಿಗಳಿಂದ 170 ಕ್ಕೂ ಹೆಚ್ಚಿನ ಮಹಿಳೆಯರು ಭಾಗವಹಿಸಿದ್ದರು.



## ಶ್ರೀಮತಿ ಸರಸ್ವತಿ ಎನ್ ರವಿ ಇವರಿಗೆ ಸನ್ಮಾನ

**ಉತ್ತರ ಕನ್ನಡ :** "ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ" ಅಂಗವಾಗಿ ಕನ್ನಡ ಸಾಹಿತ್ಯ ಪರಿಷತ್ ಶಿರಸಿ ತಾಲ್ಲೂಕು ಘಟಕ ವತಿಯಿಂದ ಸೇವಾದೀಕ್ಷೆ ಸಮಾರಂಭ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ. ಎನ್. ರವಿ ಇವರಿಗೆ ಸನ್ಮಾನಿಸಲಾಯಿತು.

## ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ (ಡಿ.ಸಿ.ಬಿ.ಎಂ)
## 4ನೇ ತಂಡದ 2ನೇ ಸಂಪರ್ಕ ವರ್ಗ ದಿನಾಂಕಗಳು (ಕಂಟ್ಯಾಕ್ಟ ಕ್ಲಾಸ್‌ಗಳು)

ದಿನಾಂಕ 09.04.2022 ಹಾಗೂ 10.04.2020 ಬೆಂಗಳೂರು, ಶಿವಮೊಗ್ಗ, ಕಾರವಾರ ಹಾಗೂ ಹೊಸಪೇಟೆ ದಿನಾಂಕ 23.04.2022 ಹಾಗೂ 24.04.2022 ಪುತ್ತೂರು, ಚಿಕ್ಕೋಡಿ, ಮುಧೋಳ ಹಾಗು ಬಳ್ಳಾರಿ ಒಂದನೇಯ ಸಂಪರ್ಕ ವರ್ಗಕ್ಕೆ ಯಾವ ಕೇಂದ್ರಗಳಲ್ಲಿ ಹಾಜರಾದ ಅಭ್ಯರ್ಥಿಗಳು ಅದೇ ಕೇಂದ್ರದಲ್ಲಿ 2ನೇ ಸಂಪರ್ಕವರ್ಗಕ್ಕೂ ಹಾಜರಾಗಬೇಕು. ಒಂದು ವೇಳೆ ನೀವು ಹಾಜರಾಗ ಬಯಸುವ ಕೇಂದ್ರವನ್ನು ಬದಲಾಯಿಸಿಕೊಳ್ಳಬೇಕಿದ್ದರೆ ಮುಂಚಿತವಾಗಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ತರಬೇತಿ ವಿಭಾಗಕ್ಕೆ ಕಳುಹಿಸಿ ಅನುಮತಿ ಪಡೆಯುವುದು.

### ಅಧ್ಯಯನ ವರದಿ ಸಲ್ಲಿಕೆ

2ನೇ ಸಂಪರ್ಕ ವರ್ಗದ ಅವಧಿಯಲ್ಲಿ ಎಲ್ಲಾ ಶಿಬಿರಾರ್ಥಿಗಳು ಅಧ್ಯಯನ ವರದಿಗಳನ್ನು ಸಲ್ಲಿಸತಕ್ಕದ್ದು. ಅಧ್ಯಯನ ವರದಿಗಳು ಕೇಂದ್ರ ಕಛೇರಿಗೆ ತಲುಪಿರದಿದ್ದಲ್ಲಿ ದೂರವಾಣಿ ಮೂಲಕ ತಿಳುಹಿಸುವುದು.

## ವಲಯವಾರು ಸಭೆ

**ಉಡುಪಿ :** ದಿನಾಂಕ 02.03.2022 ರಿಂದ ದಿನಾಂಕ 05.03.2022 ವರೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಉಡುಪಿ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ಸ್ಥಳಿಯ ಮಟ್ಟದಲ್ಲಿ ಅವರ ಕುಂದುಕೊರತೆಗಳು ಹಾಗೂ ಸೌಹಾರ್ದ ಕಾಯ್ದೆಯ ತಿದ್ದುಪಡಿಗಳು ಮತ್ತು ಇತರ ಸಹಕಾರಿಗಳ ಪ್ರಗತಿಗಳ ಕುರಿತು ಚರ್ಚಿಸುವ ಉದ್ದೇಶದಿಂದ ತಾಲ್ಲೂಕುವಾರು ಒಟ್ಟು 6 ವಿವಿಧ ಸ್ಥಳಗಳಲ್ಲಿ ಸಭೆನ್ನು ಆಯೋಜಿಸಲಾಗಿತ್ತು.

| ಕ್ರ.ಸಂ | ಸಭೆ ನಡೆದ ದಿನಾಂಕ | ಭಾಗವಹಿಸಿದ ತಾಲ್ಲೂಕುಗಳು | ಸಭೆ ನಡೆದ ಸ್ಥಳ | ಹಾಜರಿದ್ದ ಪ್ರತಿನಿಧಿಗಳು |
|---|---|---|---|---|
| 1 | 02.03.2022 | ಕಾಪು ಮತ್ತು ಪಡುಬಿದ್ರೆ ತಾಲ್ಲೂಕು | ಸ್ವರ್ಣ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ | 11 |
| 2 | 03.03.2022 | ಕಾರ್ಕಳ ಮತ್ತು ಹೆಬ್ರಿ ತಾಲ್ಲೂಕು | ಕೊಂಕಣ್ ಕ್ಯಾಥೊಲಿಕ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ | 16 |
| 3 | 04.03.2022 | ಉಡುಪಿ ತಾಲ್ಲೂಕು | ಶ್ರೀರಸ್ತು ಸೌಹಾರ್ದ ಸಹಕಾರಿ ನಿ | 43 |
| 4 | 04.03.2022 | ಬ್ರಹ್ಮಾವರ ತಾಲ್ಲೂಕು | ಶ್ರೀ ಗುರುನರಸಿಂಹ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ | 20 |
| 5 | 05.03.2022 | ಕುಂದಾಪುರ ತಾಲ್ಲೂಕು | ಮಿತ್ರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ | 17 |
| 6 | 05.03.2022 | ಬೈಂದೂರು ತಾಲ್ಲೂಕು | ಸುಲಭ ವಿವಿದೋದ್ದೇಶ ಸೌಹಾರ್ದ ಸಹಕಾರಿ | 16 |

ಮೇಲ್ಕಂಡ ವಿವಿಧ ಸಹಕರಿಗಳ ಸಹಯೋಗದಲ್ಲಿ ಸಭೆಗಳನ್ನು ಆಯೋಜನೆ ಮಾಡಲಾಗಿದ್ದು ಎಲ್ಲಾ ಸಭೆಗಳ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್,ಕೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ.ಸದಾಶಿವ ಶೆಟ್ಟಿ ರವರು ಭಾಗವಹಿಸಿದ್ದರು. ಉಡುಪಿ ಜಿಲ್ಲೆ ಸೌಹಾರ್ದ ಒಕ್ಕೂಟದ ನಿರ್ದೇಶಕರುಗಳು ಸದರಿ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿ ಸೌಹಾರ್ದ ಕಾಯ್ದೆಯ ತಿದ್ದುಪಡಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರ ಜವಬ್ದಾರಿಗಳ ಕುರಿತು ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್. ಕೆ ರವರು ವಿವರಣೆ ನೀಡಿದರು.

**ದಾವಣಗೆರೆ :** ದಿನಾಂಕ 10.03.2022 ರಂದು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ದಾವಣಗೆರೆ ಜಿಲ್ಲೆಯ ವೆಜಿಟೆಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ನಿ,. ಇದರ ನೂತನ ಆಡಳಿತ ಮಂಡಲಿಗೆ ಶುಭಾಶಯ ಕೋರಿ, ಆಡಳಿತ ಮಂಡಲಿ ಸದಸ್ಯರ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಿ ವಿಶೇಷಾಧಿಕಾರಿಯ ಅಧಿಕಾರವನ್ನು ಹಸ್ತಾಂತರ ಮಾಡಿದರು.

## ಸಮಗ್ರ ಅಭಿವೃದ್ಧಿ ತರಬೇತಿ ಕಾರ್ಯಗಾರ

**ಉಡುಪಿ :** ದಿನಾಂಕ 15.03.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇರಿ ಇದರ ವತಿಯಿಂದ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ ಆಯೋಜಿಸಲಾಗಿದ್ದ ಸಹಕಾರಿಗಳ ಸಮಗ್ರ ಅಭಿವೃದ್ಧಿ ಕಾರ್ಯಗಾರದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್ ಕೃಷ್ಣಾರೆಡ್ಡಿ ರವರು ಉದ್ಘಾಟಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ವಹಿಸಿದ್ದರು. ಸದರಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಾದಾಶಿವ ಶೆಟ್ಟಿ ರವರು ಭಾಗವಹಿಸಿದ್ದರು. ಹಾಗೂ ಅತಿಥಿಗಳಾಗಿ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಭಾಸ್ಕರ್ ಕಾಮತ್ ಭಾಗವಹಿಸಿದ್ದರು. ಸದರಿ ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ವೈ.ವಿ ಗುಂಡುರಾವ್ ಇವರು ಸೌಹಾರ್ದ ಸಹಕಾರಿಗಳ ಸಮಗ್ರ ಅಭಿವೃದ್ಧಿ ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು. ಸದರಿ ಕಾರ್ಯಗಾರದಲ್ಲಿ 96 ಸೌಹಾರ್ದ ಸಹಕಾರಿಗಳಿಂದ 140 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಕ್ಷಿಣ ಕನ್ನಡ :** ದಿನಾಂಕ 15.03.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇರಿ ಇದರ ವತಿಯಿಂದ ದಕ್ಷಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ ಆಯೋಜಿಸಲಾಗಿದ್ದ ಸಹಕಾರಿಗಳ ಸಮಗ್ರ ಅಭಿವೃದ್ಧಿ ಕಾರ್ಯಗಾರದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಉದ್ಘಾಟಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ವಹಿಸಿದ್ದರು. ಸದರಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಾದಾಶಿವ ಶೆಟ್ಟಿ ರವರು ಭಾಗವಹಿಸಿದ್ದರು. ಹಾಗೂ ಅತಿಥಿಗಳಾಗಿ ದಕ್ಷಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸುರೇಶ್ ರೈ ಹಾಗೂ ಆತ್ಮಶಕ್ತಿ ವಿವಿದೋದ್ದೇಶ ಸಹಕಾರಿ ಸಂಘ, ಪಡೀಲ್, ಮಂಗಳೂರು. ಇದರ ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ಭಾಗವಹಿಸಿದ್ದರು. ಸದರಿ ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ವೈ.ವಿ ಗುಂಡುರಾವ್ ಇವರು ಸೌಹಾರ್ದ ಸಹಕಾರಿಗಳ ಸಮಗ್ರ ಅಭಿವೃದ್ಧಿ ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು. ಸದರಿ ಕಾರ್ಯಗಾರದಲ್ಲಿ 86 ಸೌಹಾರ್ದ ಸಹಕಾರಿಗಳಿಂದ 130 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿಗಳ ಸುಸ್ಥಿರ ಅಭಿವೃದ್ಧಿ ಚಿಂತನಾ ಕಾರ್ಯಗಾರ

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಮತ್ತು ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸೌಹಾರ್ದ ಸಹಕಾರಿಗಳ ಸುಸ್ಥಿರ ಅಭಿವೃದ್ಧಿ ಚಿಂತನಾ ಕಾರ್ಯಗಾರವನ್ನು ದಿನಾಂಕ 14.03.2022 ರಂದು ಸೋಮವಾರ ಮಧ್ಯಾಹ್ನ 02.30 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ಸೌಹಾರ್ದ ಸಹಕಾರಿಗಳು ಸ್ವಾವಲಂಬಿಯಾಗಿ, ಸುಸ್ಥಿರ ಬೆಳವಣಿಗೆಯೊಂದಿಗೆ ಉತ್ತಮವಾಗಿ ಕಾರ್ಯನಿರ್ವಹಿಸಲು ಮತ್ತು ಜಿಲ್ಲಾ ಒಕ್ಕೂಟದ ಬಲವರ್ಧನೆಯ ಕುರಿತು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಮಾರ್ಗದರ್ಶನ ಮಾಡಿದ್ದರು. ನಂತರ ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ಕುರಿತು ಚರ್ಚಿಸಿ, ಸಹಕಾರಿಗಳಿಗೆ ಪರಿಹಾರವನ್ನು ನೀಡಿದ್ದರು. ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ'ರವರು ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದರು. ಸದರಿ ಸಭೆಯಲ್ಲಿ 72 ಸೌಹಾರ್ದ ಸಹಕಾರಿಗಳಿಂದ 89 ಪ್ರತಿನಿಧಿಗಳು ಭಾಗವಹಿಸಿದ್ದರು.

## ಒತ್ತಡ ನಿರ್ವಹಣೆ ಮತ್ತು ಗ್ರಾಹಕ ಸೇವೆಗಳ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ

ಮೈಸೂರು ಪ್ರಾಂತದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಒತ್ತಡ ನಿರ್ವಹಣೆ ಮತ್ತು ಗ್ರಾಹಕ ಸೇವೆಗಳ ನಿರ್ವಹಣೆ ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 05.03.2022 ಶನಿವಾರ ಮಧ್ಯಾಹ್ನ 3:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ರವರು ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದರು. ನಂತರ ಶ್ರೀ ನಂದೀಶ್ ಹಿರೇಮಠ್, ಕಾರ್ಪೊರೇಟ್ ಟ್ರೈನರ್, ಇವರು ಒತ್ತಡ ನಿರ್ವಹಣೆ ಮತ್ತು ಗ್ರಾಹಕ ಸೇವೆಗಳ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 105 ಸೌಹಾರ್ದ ಸಹಕಾರಿಗಳಿಂದ 153 ಪ್ರತಿನಿಧಿಗಳು ಭಾಗವಹಿಸಿದ್ದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು

**ಚಿತ್ರದುರ್ಗ** : ದಿನಾಂಕ 07.03.2022 ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ,. ಜೆ.ಸಿ.ಆರ್ ಬಡಾವಣೆ ಶಾಖೆ, ಚಿತ್ರದುರ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಸ್.ಆರ್ ಲಕ್ಷ್ಮೀಕಾಂತ ರೆಡ್ಡಿ ರವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ವೀರಭದ್ರಬಾಬು, ಉಪಾಧ್ಯಕ್ಷರು, ಚಿತ್ರದುರ್ಗ ಜಿಲ್ಲಾ ಸೌಹಾರ್ದ ಒಕ್ಕೂಟ, ಶ್ರೀ ಎಂ .ಹೆಚ್. ಪ್ರಾಣೇಶ್, ಅಧ್ಯಕ್ಷರು, ಶ್ರೀ ಕನ್ನಕಾ ಪರಮೇಶ್ವರಿ ಸೌಹಾರ್ದ ಸಹಕಾರಿ, ಶ್ರೀ ಡಿ.ಆರ್. ತಿಪ್ಪೇಸ್ವಾಮಿ, ನಿರ್ದೇಶಕರು, ಆದರ್ಶ ಸೌಹಾರ್ದ ಸಹಕಾರಿ ಹಾಗೂ ಶ್ರೀ ರಮೇಶ್ ಹೆಗಡೆ, ಉಪನ್ಯಾಸಕರು, ಇವರು ಉಪಸ್ಥಿತ–ರಿದ್ದರು. ಸಹಕಾರಿಗಳ ಸುಸ್ಥಿರ ಅಭಿವೃದ್ಧಿ ಚಿಂತನಾ ಕಾರ್ಯಗಾರ ಮತ್ತು ಅಪೆಕ್ಸ್ ಬ್ಯಾಂಕ್ ಸ್ಥಾಪನೆ ಕುರಿತು ಸಹಕಾರಿಗಳೊಂದಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ನಡೆಸಿಕೊಟ್ಟರು. 45 ಸೌಹಾರ್ದ ಸಹಕಾರಿಗಳ 60 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ದಾವಣಗೆರೆ** : ದಿನಾಂಕ 07.03.2022 ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅದ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಅಶೋಕ ಇನ್, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಂ–ಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಹೆಚ್.ಎಮ್. ನಾಗರಾಜ್, ಅದ್ಯಕ್ಷರು, ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ, ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಉಮೇಶ್ ಶೆಟ್ಟಿ, ಉಪಾಧ್ಯಕ್ಷರು, ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ, ಇವರು ಉಪಸ್ಥಿತರಿದ್ದರು. ಸಹಕಾರಿಗಳ ಸುಸ್ಥಿರ ಅಭಿವೃದ್ಧಿ ಚಿಂತನಾ ಕಾರ್ಯಗಾರ ಮತ್ತು ಅಫೆಕ್ಸ್ ಬ್ಯಾಂಕ್ ಸ್ಥಾಪನೆ ಕುರಿತು ಸಹಕಾರಿಗಳೊಂದಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್, ರವರು ನಡೆಸಿಕೊಟ್ಟರು. 50 ಸೌಹಾರ್ದ ಸಹಕಾರಿಗಳ 60 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಶಿವಮೊಗ್ಗ** : ದಿನಾಂಕ 08.03.2022 ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಮಥುರಾ ಪ್ಯಾರಡೈಸ್, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಧುಕರ ಹೆಗಡೆ, ಶ್ರೀ ಅರುಣ್ ನಡಕಟ್ಟಿ, ನೋಡಲ್ ಆಫಿಸರ್, ವಿಕಾಸ್ ಸೌಹಾರ್ದ ಬ್ಯಾಂಕ್, ರವರು ಭಾಗವಹಿಸಿದ್ದರು. ಶ್ರೀ ಸುರೇಶ್, ಉಪಾಧ್ಯಕ್ಷರು, ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ, ಶಿವಮೊಗ್ಗ ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಹರಿಕೃಷ್ಣ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್, ರವರು ನಡೆಸಿಕೊಟ್ಟರು. 77 ಸೌಹಾರ್ದ ಸಹಕಾರಿಗಳ 152 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ತುಮಕೂರು** : ದಿನಾಂಕ 10.03.2022 ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಶ್ರೀ ಶಿವಾಜಿ ಪತ್ತಿನ ಸೌಹಾರ್ದ ಸಹಕಾರಿ ನಿ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ, ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಲಕ್ಷ್ಮೀನಾರಾಯಣ, ಅಧ್ಯಕ್ಷರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ, ಶ್ರೀ ಸುರೇಶ್

ರಾವ್, ಅಧ್ಯಕ್ಷರು, ಶ್ರೀ ಶಿವಾಜಿ ಪತ್ತಿನ ಸೌಹಾರ್ದ ಸಹಕಾರಿ ನಿ, ಶ್ರೀ ಲ್ಯಾನ್ಸಿ ಹೆಚ್ ಪಾಯ್ಸ್, ಅಧ್ಯಕ್ಷರು, ಸೆಕ್ರೇಡ್ ಹಾರ್ಟ್ ಸೌಹಾರ್ದ ಸಹಕಾರಿ, ಶ್ರೀ ವಿಜಯ್, ಅಧ್ಯಕ್ಷರು, ಸನ್‌ರೈಸ್ ಸೌಹಾರ್ದ ಸಹಕಾರಿ, ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ನಡೆಸಿಕೊಟ್ಟರು. 118 ಸೌಹಾರ್ದ ಸಹಕಾರಿಗಳಿಂದ 132 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಬಾಗಲಕೋಟ :** ದಿನಾಂಕ 11.03.2022 ರಂದು ಬಾಗಲಕೋಟ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ,, ನವನಗರ, ಬಾಗಲಕೋಟ ಇಲ್ಲಿ ಬಾಗಲಕೋಟ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರಿಗೆ ವಿಷಯಾಧಾರಿತ ತರಬೇತಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಎನ್. ಪಾಟೀಲ, ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ರಾಜಶೇಖರ ಶೀಲವಂತ, ಮಾನ್ಯ ಸಹಕಾರ ಭಾರತಿ ರಾಜ್ಯಾಧ್ಯಕ್ಷರು, ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾನ್ಯ ಹಿರಿಯ ಸಹಕಾರಿಗಳು ಹಾಗೂ ಶ್ರೀ ಬಸವರಾಜ ಹೊಂಗಲ, ಮಾನ್ಯ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ ಹೆಗಡೆ, ಕಾಗೇರಿ ಇವರು ಆಡಳಿತ ಮಂಡಲಿ ಸದಸ್ಯರ ಕರ್ತವ್ಯಗಳು, ನಗದು ಪರಿಶೀಲನೆ, ವೆಚ್ಚಗಳ ಕಡತ ವಿಷಯದ ಕುರಿತು, ಇವರು ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮಕದಲ್ಲಿ ಬಾಗಲಕೋಟ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ ಎಚ್, ಇವರು ಮತ್ತು ಸಹಾಯಕಿಯಾದ ರೇಶ್ಮಾ ಪಾಟೀಲ ಇವರುಗಳು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 145 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

---

**ವಿಜಯಪುರ :** ದಿನಾಂಕ 11.03.2022 ರಂದು ಶುಭಶ್ರೀ ಸಾಗರ ಹೋಟೆಲ್ ಸೋಲ್ಲಾಪುರ ರಸ್ತೆ ವಿಜಯಪರದಲ್ಲಿ ಇಲ್ಲಿ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು/ಅಧ್ಯಕ್ಷರುಗಳಿಗಾಗಿ ಒಂದು ದಿನದ ವಿಷಯಾಧಾರಿತ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಎಚ್ ಕೃಷ್ಣಾರೆಡ್ಡಿ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ ಉಪ್ಪಿನ್ ಇವರು ವಹಿಸಿದರು ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಇವರು ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಆರೋನ್ ನಡಕಟ್ಟಿನ ಹಾಗೂ ಶ್ರೀ ಶಿವಪುತ್ರಪ್ಪ ಲೋನಿ ಇವರಗಳು ಸೌಹಾರ್ದ ಸಹಕಾರಿಗಳಿಗೆ ಹಾಗೂ ಸಿಬ್ಬಂಧಿಗಳಿಗಾಗಿ ಆರೋಗ್ಯವಿಮೆ ಯೋಜನೆ ಕುರಿತು ಮತ್ತು ಸಹಕಾರಿಗಳಲ್ಲಿ ನಿರ್ದೇಶಕರ ಕರ್ತವ್ಯಗಳು, ನಗದು ಪರಿಶೀಲನೆ, ಸಾಲ ವಿತರಣೆ ಹಾಗೂ ವೆಚ್ಚಗಳ ಕಡಿತದ ಕುರಿತು ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮಕದಲ್ಲಿ ವಿಜಯಪುರ ಜಿಲ್ಲಾ ಸಂಯೋಜಕರುಗಳಾದ ಶ್ರೀ ಶಿವಕಾಂತ ಎನ್ ಮತ್ತು ಶ್ರೀ ಪ್ರಭಯ್ಯಾ ಹಿರೇಮಠ ಇವರುಗಳು ಉಪಸ್ಥಿತ–ರಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 57 ಸೌಹಾರ್ದ ಸಹಕಾರಿಗಳಿಂದ 85 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

---

**ಧಾರವಾಡ–ಗದಗ–ಹಾವೇರಿ :** ದಿನಾಂಕ 12 ಮಾರ್ಚ 2022 ರ ಶನಿವಾರ ದಂದು ಕೆ.ಎಂ.ಎಫ್. ತರಬೇತಿ ಕೇಂದ್ರ ಧಾರವಾಡ ಇಲ್ಲಿ ಧಾರವಾಡ–ಗದಗ–ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕರುಗಳಿಗಾಗಿ ವಿಷಯಾಧಾರಿತ ತರಬೇತಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಹೆಚ್. ಕೃಷ್ಣಾರೆಡಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದರು, ಉದ್ಘಾಟನೆಯನ್ನು ಶ್ರೀ ರವಿಂದ್ರ ಆರ್ ಎಲಿಗಾರ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಮಲ್ಲಿಕಾರ್ಜುನ್ ಹೊರಕೇರಿ ಮಾನ್ಯ ಅಧ್ಯಕ್ಷರು ಕೆ.ಸಿ.ಸಿ. ಬ್ಯಾಂಕ್ ಧಾರವಾಡ ಇವರು, ಅತಿಥಿಗಳಾಗಿ ಶ್ರೀ ನಾಗೇಂದ್ರ ಮಾಳಿ, ಮಾನ್ಯ ಅಧ್ಯಕ್ಷರು ನವಚೇತನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹಾವೇರಿ, ಶ್ರೀ ಲೋಚನೇಶ ಬಿ ಹೂಗಾರ ಮಾನ್ಯ ಅಧ್ಯಕ್ಷರು ಹೂಗಾರ ವಿವಿ ಸೌಹಾರ್ದ ಸ ನಿ., ಹುಬ್ಬಳ್ಳಿ ಮತ್ತು ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ಶಿರಸಿ ಮಾನ್ಯ ಸಂಪನ್ಮೂಲ ವ್ಯಕ್ತಿಗಳು., ಶಿರಸಿ ಇವರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಇವರು ಆಡಳಿತ ಮಂಡಲಿ ಸದಸ್ಯರ ಕರ್ತವ್ಯಗಳು, ನಗದು ಪರಿಶೀಲನೆ, ವೆಚ್ಚಗಳ ಕಡತ ವಿಷಯದ ಕುರಿತು, ಇವರು ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮಕದಲ್ಲಿ ಧಾರವಾಡ–ಗದಗ–ಹಾವೇರಿ ಜಿಲ್ಲೆಯ ಜಿಲ್ಲಾ ಸಂಯೋಜಕರುಗಳಾದ ಶ್ರೀ ಬಸವರಾಜ ಎಸ್ ಟಿ ಮತ್ತು ಶ್ರೀ ಕಲ್ಮೇಶ ಎಸ್ ಎಮ್ ಇವರುಗಳು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಧಾರವಾಡ–ಗದಗ–ಹಾವೇರಿ ಜಿಲ್ಲೆಯ 102 ಪ್ರತಿನಿಧಿಗಳು ಉಪಸ್ಥಿತರಿದ್ದರು.

**ಬೆಳಗಾವಿ :** ದಿನಾಂಕ 12.03.2022 ರಂದು ಬೆಳಗಾವಿ ಜಿಲ್ಲೆಯ 10 ಕೋಟಿಗಿಂತ ಹೆಚ್ಚಿನ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳಿಗೆ "ಹೊಟೆಲ್ ಸನ್ಮಾನ ಕಾಲೇಜ್ ರೋಡ ಬೆಳಗಾವಿ" ಇಲ್ಲಿ "ವಿಷಯಾಧಾರಿತ ತರಬೇತಿ" ಯನ್ನು ನೀಡಲಾಯಿತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ್, ಶ್ರೀ ಮಧುಕರ ಹೆಗಡೆ ಸನ್ನದು ಲೆಕ್ಕಪರಿಶೋಧಕರು ಹಾಗೂ ಶ್ರೀ ಬಸವರಾಜ ಹೊಂಗಲ್, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಧುಕರ ಹೆಗಡೆ ಇವರು ಆದಾಯ ತೆರಿಗೆ, ಜಿ.ಎಸ್.ಟಿ ಹಾಗೂ ವೆಚ್ಚಗಳ ಕಡಿತ ವಿಷಯದ ಕುರಿತು ಉಪನ್ಯಾಸ ನೀಡಿದರು. ವಿಷಯಾಧಾರಿತ ತರಬೇತಿಯಲ್ಲಿ 96 ಜನ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಹಾಜರಿದ್ದರು. ಸದರಿ ಕಾರ್ಯಕ್ರಮಕದಲ್ಲಿ ಬೆಳಗಾವಿ ಜಿಲ್ಲೆಯ ಜಿಲ್ಲಾ ಸಂಯೋಜಕರುಗಳು ಉಪಸ್ಥಿತರಿದ್ದರು.

---

**ಬಳ್ಳಾರಿ ಮತ್ತು ವಿಜಯನಗರ :** ದಿನಾಂಕ 16-03-2022 ರಂದು ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಹೊಟೆಲ್ ಮಲ್ಲಿಗೆಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಂಜನಗೌಡರವರು ಕಾರ್ಯಕ್ರಮದ ಪ್ರಾಸ್ಥಾವಿಕ ನುಡಿಯನ್ನು ನುಡಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ವಹಿಸಿದ್ದರು. ಅತಿಥಿಗಳಾಗಿ ಸಹಕಾರ ಸಂಘಗಳ ನಿವೃತ್ತ ಸಹಾಯಕ ನಿಬಂಧಕರಾದ ಶ್ರೀ ಲಿಯಾಕತ ಅಲಿಯವರು ಮತ್ತು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಅಮೃತ ಜೋಶಿರವರು ಸಹಕಾರಿಯ ಉತ್ತಮ ನಿರ್ವಹಣಾ ಕೌಶಲ್ಯಗಳು ಕುರಿತು ಉಪನ್ಯಾಸ ನೀಡಿದರು. ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಸೌಹಾಗಳಿಂದ 112 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಕೊಪ್ಪಳ :** ದಿನಾಂಕ 17-03-2022 ರಂದು ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಸಿಬಿಎಸ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಒಕ್ಕೂಟದ ಆಡಳಿತ ಮಂಡಳಿ ಸದಸ್ಯರು ಹಾಗೂ ಗಂಗಾಧರೇಶ್ವರ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಭಾಕರ ಹೊಸಕೇರಿ, ಹಾಗೂ ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರು ಮತ್ತು ಲೆಕ್ಕಪರಿಶೋಧಕರಾದ ಶ್ರೀ ಎರಿಸ್ವಾಮಿ, ಸಿ,ಬಿ,ಎಸ್ ಸಹಕಾರಿ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿ.ಜೆ ಜವಳಿರವರು ಜಿಲ್ಲಾ ಸಂಯೋಜಕರಾದ ಶ್ರೀ ಪವನ ಎಮ್ ಆರ್‌ರವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಎರಿಸ್ವಾಮಿ ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರು ಮತ್ತು ಲೆಕ್ಕಪರಿಶೋಧಕರು ಇವರು ಆಗಮಿಸಿ ಲೆಕ್ಕಪರಿಶೋಧನಾ ಪೂರ್ವ ತಯಾರಿ ಮತ್ತು ಲೆಕ್ಕಪರಿಶೋಧನೆಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 240 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಚಿಕ್ಕಮಗಳೂರು :** ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ "ಸುಸ್ಥಿರ ಅಭಿವೃದ್ಧಿ" ಕುರಿತ ಸಮಾಲೋಚನಾ ಸಭೆಗಳನ್ನು ಚಿಕ್ಕಮಗಳೂರು ಮತ್ತು ಬಾಳೆಹೊನ್ನೂರು ಗಳಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ಸಭೆಗಳ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ.ಸದಾಶಿವ ಶೆಟ್ಟಿ ರವರು ಭಾಗವಹಿಸಿದ್ದರು. ಹಾಗೂ ಅತಿಥಿಗಳಾಗಿ ಯಡಗೆರೆ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರು ಮತ್ತು "ಸಹಕಾರ ರತ್ನ" ಪ್ರಶಸ್ತಿ ಪುರಸ್ಕೃತರು ಆದ ಶ್ರೀ ವೈ.ಎಸ್ ಸುಬ್ರಹ್ಮಣ್ಯರವರು ಭಾಗವಹಿಸಿದ್ದರು.

**ರಾಯಚೂರು :** ದಿನಾಂಕ 17-03-2022 ರಂದು ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಧ್ಯಾನ ಮಂದಿರ, ಸಿಂಧನೂರ ರಸ್ತೆ, ಮಾನವಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿಯವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ನುಡಿದರು. ಕಾರ್ಯಕ್ರಮದಲ್ಲಿ ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರುಗಳು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ನಾಗರಾಜಯ್ಯ, ನಿವೃತ್ತ ಅಪರ ನಿಬಂಧಕರು, ಬೆಂಗಳೂರು ಇವರು ಸಹಕಾರಿಗಳಲ್ಲಿ ನಿರ್ದೇಶಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 218 ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಒಕ್ಕೂಟ ರಚನೆಯ ಕುರಿತು ಸಭೆ

**ಬೆಳಗಾವಿ :** ದಿನಾಂಕ 08.03.2022 ರಂದು ಬೆಳಗಾವಿಯ ಸನ್ಮಾನ ಹೊಟೇಲ್‌ನಲ್ಲಿ ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಚಿಂತನಾ ಸಭೆ" ಯನ್ನು ಹಮ್ಮಿಕೊಳಲಾಗಿತ್ತು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ನಿಯೋಜಿತ ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆಯ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ, ಮಾನ್ಯ ಉಪ ಪ್ರಧಾನ ವ್ಯಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರುಗಳು ಉಪಸ್ಥಿತ-ರಿದ್ದರು. ವಿವಿಧ ಸೌಹಾರ್ದ ಸಹಕಾರಿಗಳಿಂದ 36 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾವೇರಿ :** ದಿನಾಂಕ 08.03.2022 ರಂದು ಹಾವೇರಿಯ ನವಚೇತನ ಹೈಟ್ಸ್, ಅಶ್ವಿನಿ ನಗೆ 1ನೇ ಕ್ರಾಸ್, 3ನೇ ಮಹಡಿಯ ಸಭಾಂಗಣ ಇಲ್ಲಿ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ನಿಯೋಜಿತ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆಯ ಕುರಿತು ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಮ್. ಬಿ. ಕಲಾಲ, ಮತ್ತು ಹಾವೇರಿ ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ ಎಸ್ ಎಮ್ ಇವರುಗಳು ಉಪಸ್ಥಿತರಿದ್ದರು. ವಿವಿಧ ಸೌಹಾರ್ದ ಸಹಕಾರಿಗಳಿಂದ 72 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ

**ಚಿತ್ರದುರ್ಗ :** ದಿನಾಂಕ 07.03.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಶ್ರೀ ಕನ್ಯಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ, ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಪಡೆದುಕೊಂಡರು. ಸಹಕಾರಿಯ ಅಭಿವೃದ್ಧಿಯ ದೃಷ್ಟಿಯಿಂದ ಕೆಲವು ಸಲಹೆ ಸೂಚನೆಗಳನ್ನು ನೀಡಿದರು. ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

**ಕೊಪ್ಪಳ :** ಸಿ.ಬಿ.ಎಸ್ ಸಹಕಾರಿ ಬ್ಯಾಂಕ್ ನಿ., ಗಂಗಾವತಿ ಸದರಿ ಸಹಕಾರಿಗೆ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿರವರು ಭೇಟಿ ನೀಡಿ ಸಹಕಾರಿ ಬ್ಯಾಂಕಿನ ಕಾರ್ಯಚಟುವಟಿಕೆಯ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರರವರು ಮತ್ತು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಪವನ ಎಮ್ ಆರ್ ರವರು ಉಪಸ್ಥಿರಿದ್ದರು.

## ಕಟ್ಟಡ ಪ್ರಗತಿ ಪರಿಶೀಲನಾ ಸಭೆ

**ಕಲಬುರಗಿ : ದಿನಾಂಕ** 22.03.2022 ರಂದು ಕಲಬುರಗಿ ಪ್ರಾಂತೀಯ ಕಛೇರಿಯ ನೂತನ ಕಟ್ಟಡದ ಪ್ರಗತಿ ಪರಿಶೀಲನಾಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್, ಗುತ್ತಿಗೆದಾರರಾದ ಶ್ರೀ ಬಿ.ಎಸ್ ಪಾಟೀಲ್ ರವರ ಪರವಾಗಿ ಶ್ರೀ ಎಂ ಕೆ ಪಾಟೀಲ್ ಮತ್ತು ವಾಸ್ತುಶಿಲ್ಪಿಗಳಾದ ಶ್ರೀ ಬಿ.ಜೆ ಖಂಡೇರಾವ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೆಚ್, ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿ ನ್ಯಾಯಾಲಯದ ನೂತನ ಪಿ.ಡಿ ಖಾತೆಯ ವಿವರ

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

**ವಸೂಲಾತಿ ಅಧಿಕಾರಿ (ನಿ–441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರ ನ್ಯಾಯಾಲಯ**
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
**ಸೌಹಾರ್ದ ಸಹಕಾರಿ ಸೌಧ**

1ನೇ ಮಹಡಿ, #68, 17 ಮತ್ತು 18ನೇ ಕ್ರಾಸ್ ನಡುವೆ ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055

www.441court@souharda.coop    Phone-080-2344993334

ಕ್ರಮ ಸಂಖ್ಯೆ :ಸ.ಸಂ.ಸ.ನಿ/ವಅ/1/2022–23    ದಿನಾಂಕ: 01.04.2022

**ಸುತ್ತೋಲೆ**

ವಸೂಲಾತಿ ಅಧಿಕಾರಿ(ನಿ–441) ಹಾಗೂ ಸಹಕಾರ ಸಹಕಾರಿಗಳ ಸಹಾಯಕ ನಿಬಂಧಕರ ನ್ಯಾಯಾಲಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇಲ್ಲಿ ದಾಖಲಾಗುವ ಅಮಲ್ಜಾರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಚಾಲ್ತಿ ಖಾತೆ ಸಂಖ್ಯೆ:04241010005462ಗೆ ಜಮೆ ಮಾಡಿರುತ್ತೀರಿ ಆದರೆ ಸರ್ಕಾರದ ಆದೇಶದನ್ವಯ ದಿನಾಂಕ:01.04.2022 ರಿಂದ ವಸೂಲಾತಿ ಅಧಿಕಾರಿ(ನಿ–441) ಹಾಗೂ ಸಹಕಾರ ಸಹಕಾರಿಗಳ ಸಹಾಯಕ ನಿಬಂಧಕರ ಹೆಸರಿನಲ್ಲಿ ಪಿ.ಡಿ ಖಾತೆಯನ್ನು ತೆರೆಯಲಾಗಿದ್ದು, ಇನ್ನೂಮುಂದೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಅಮಲ್ಜಾರಿ ಶುಲ್ಕವನ್ನು ಈ ಕೆಳಗೆ ನಮೂದಿಸಿರುವ ಪಿ.ಡಿ ಖಾತೆಗೆ ಜಮೆ ಮಾಡಲು ತಿಳಿಸಿದೆ.

| | |
|---|---|
| ಖಾತೆ ಹೆಸರು | ARCS-R441 |
| ಬ್ಯಾಂಕ್ ಹೆಸರು ಮತ್ತು ಶಾಖೆ | ಕೆನರಾ ಬ್ಯಾಂಕ್, ಮಲ್ಲೇಶ್ವರಂ |
| ಪಿ.ಡಿ ಖಾತೆ ಸಂಖ್ಯೆ | 9921201006879 |
| ಐ.ಎಫ್.ಎಸ್.ಸಿ | CNRB0010424 |

(ಬಿ.ಪಿ ಪ್ರೇಮಾನಂದ)
ವಸೂಲಾಧಿಕಾರಿ ಹಾಗೂ (ನಿ.441)
ಸಹಕಾರ ಸಂಘಗಳ ಸಹಾಯಕ ನಿಬಂಧಕ
ಕ.ರಾ.ಸೌ.ಸಂ.ಸ.ನಿ. ಬೆಂಗಳೂರು

## ಸಂಯುಕ್ತ ಸಹಕಾರಿಯ ಪ್ರಕಟಣೆ ಪುಸ್ತಕಗಳ ವಿವರ

| ಕ್ರ..ಸಂ. | ಪುಸ್ತಕದ ಹೆಸರು | ಬೆಲೆ |
|---|---|---|
| 1 | ಸೌಹಾರ್ದ ಸಹಕಾರಿ ಮಾರ್ಗದರ್ಶಿ | 15/– |
| 2 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಉಪವಿಧಿ | 30/– |
| 3 | ಸೌಹಾರ್ದ ಸಹಕಾರಿಗಳ ಮಾದರಿ ಸಾಲ ಮತ್ತು ಠೇವಣಾತಿ ನಿಯಮಗಳು | 20/– |
| 4 | ಸೌಹಾರ್ದ ಸಹಕಾರಿಗಳಿಗಾಗಿ ನೌಕರರ ಮಾದರಿ ಸೇವಾ ನಿಯಮಗಳು | 15/– |
| 5 | ಸೌಹಾರ್ದ ಸಹಕಾರಿಗಳಿಗಾಗಿ ಮಾಹಿತಿ ಕೈಪಿಡಿ | 15/– |
| 6 | ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾ ನಿಯಮಗಳು | 25/– |
| 7 | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಾಕರ ಕೈಪಿಡಿ | 15/– |
| 8 | ಕರ್ನಾಟಕ ರಾಜ್ಯದ ವಿಶಿಷ್ಠ ಸಹಕಾರ ಸಂಸ್ಥೆಗಳು | 40/– |
| 9 | Special Co-opearative Societies of Karnataka | 25/– |
| 10 | ಇ–ಸ್ಟಾಂಪಿಂಗ್ ಮಾಹಿತಿ ಕೈಪಿಡಿ | 50/– |
| 11 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳು ಸಾರಾಂಶ | 100/– |
| 12 | ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು | 50/– |
| 13 | Karnataka High Court Judgements Related to Co-operative Sector | 200/– |
| 14 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಹಕ್ಕು ಕಾಯ್ದೆಯನ್ವಯ ನೀಡಲಾದ ನ್ಯಾಯಾಲಯಗಳ ತೀರ್ಪುಗಳ ಸಾರಂಶ | 100/– |
| 15 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ತೀರ್ಪುಗಳ ಸಾರಂಶ ಭಾಗ – 2 | 100/– |
| 16 | ಸಹಕಾರಿಗಳಿಗೆ ಉಪಯುಕ್ತವಾದ ಮಾದರಿಗಳ ಕೈಪಿಡಿ | 50/– |
| 17 | ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಸಂಬಂಧಿತ ತೀರ್ಪುಗಳು | 120/– |
| 18 | Karnataka High Court Judgements Related to Co-operative Sector Vol -2 | 400/– |
| 19 | Supreme Court Judgement Related to Co-operative Sector Volume - 1 | 150/– |
| 20 | Supreme Court Judgement Related to Co-operative Sector Volume - 2 | 500/– |
| 21 | ಸ್ವಾಭಿಮಾನಿ ಸಹಕಾರಿ ವಾರ್ಷಿಕ ಚಂದಾ 1 ವರ್ಷಕ್ಕೆ | 100/– |
| 22 | ಸಹಕಾರ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್ ಡಿಪ್ಲೋಮಾ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳು | 300/– |
| 23 | ವಿಷಯ–01 – ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 250/– |
| 24 | ವಿಷಯ–02 – ಸಹಕಾರಿ ಪತ್ತು ನಿರ್ವಹಣೆ | 250/– |
| 25 | ವಿಷಯ–03 – ಬ್ಯಾಂಕಿಂಗ್ ಮೂಲ ಮಾಹಿತಿ | 250/– |
| 26 | ವಿಷಯ–04 – ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 250/– |
| 27 | ವಿಷಯ–05 – ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 250/– |
| 28 | ವಿಷಯ–06 – ಮಾಹಿತಿ ತಂತ್ರಜ್ಞಾನ | 250/– |
| 29 | ಸಾಲ ವಸೂಲಾತಿ ಹಾಗೂ ದಾಖಲಾತಿಗಳ ನಿರ್ವಹಣೆ ಮತ್ತು ಭಾರತದ ಸಂವಿಧಾನ, ಅರ್ಥ, ಆಶಯ ಹಾಗೂ ಪ್ರಮುಖ ಅಂಶಗಳು | 150/– |

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಾಧಿಸಿದ 2021-22ನೇ (ಮಾರ್ಚ್ 2022ಕ್ಕೆ ಇದ್ದಂತೆ ) ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

### ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ವ್ಯವಹಾರ | 116.26 |
| ಶೇರು ಬಂಡವಾಳ | 1.03 |
| ಒಟ್ಟು ನಿಧಿಗಳು | 12.30 |
| ಒಟ್ಟು ಲಾಭ | 2.34 |
| ನಿವ್ವಳ ಲಾಭ | 1.76 |
| ಒಟ್ಟು ಎನ್.ಪಿ.ಎ ಅನುಪಾತ | 0.50% |
| ನಿವ್ವಳ ಎನ್.ಪಿ.ಎ ಅನುಪಾತ | 0.00% |

### ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 255 |
| ಸಾಲ | 193 |
| ಒಟ್ಟು ವಹಿವಾಟು | 448 |
| ದುಡಿಯುವ ಬಂಡವಾಳ | 293 |
| ಶೇರು ಬಂಡವಾಳ | 5.73 |
| ನಿವ್ವಳ ಲಾಭ | 4.25 |
| ಒಟ್ಟು ಎನ್.ಪಿ.ಎ ಅನುಪಾತ | 4.17% |
| Over Due | 2.38% |

### ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 645 |
| ಸಾಲ ಹಾಗು ಮುಂಗಡಗಳು | 405 |
| ಒಟ್ಟು ವ್ಯವಹಾರ | 1050 |
| ತೆರಿಗೆ ಮೊದಲ ಲಾಭ | 11.23 |
| ತೆರಿಗೆ ನಂತರದ ಲಾಭ | 6.35 |
| ಒಟ್ಟು ಎನ್.ಪಿ.ಎ ಅನುಪಾತ | 3.69% |
| ನೆಟ್ ಎನ್.ಪಿ.ಎ ಅನುಪಾತ | 1.30% |
| Net worth | 52 |

### ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 821 |
| ಸಾಲ ಮತ್ತು ಮುಂಗಡಗಳು | 488 |
| ಒಟ್ಟು ವ್ಯವಹಾರ | 1309 |
| ನೆಟ್ ಎನ್.ಪಿ.ಎ ಅನುಪಾತ | 0% |
| ಒಟ್ಟು ಲಾಭ | 8.96 |
| ನಿವ್ವಳ ಲಾಭ | 4.74 |

### ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸದಸ್ಯರು | 36,353 |
| ಒಟ್ಟು ಠೇವಣಿ | 226.85 |
| ಸಾಲ | 179.11 |
| ಪಾಲು ಬಂಡವಾಳ | 9.65 |
| ಒಟ್ಟು ವ್ಯವಹಾರ | 406 |
| ನಿವ್ವಳ ಲಾಭ | 4.45 |

### ಶ್ರೀ ಕನ್ನಿಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸದಸ್ಯರು | 2925 |
| ಶೇರು ಬಂಡವಾಳ | 91 ಲಕ್ಷ |
| ದುಡಿಯುವ ಬಂಡವಾಳ | 46 ಕೋಟಿ |
| ಅಪದ್ಧನ ನಿಧಿ/ಇತರ ನಿಧಿಗಳು | 9.46 ಕೋಟಿ |
| ಹೂಡಿಕೆಗಳು | 21.35 ಕೋಟಿ |
| ಠೇವಣಿಗಳು | 38 ಕೋಟಿ |
| ಸಾಲಗಳು ಮತು ಮುಂಗಡಗಳು | 26 ಕೋಟಿ |
| ಸುಸ್ತಿ ಸಾಲಗಳ ಪ್ರಮಾಣ | 0 |
| ನಿವ್ವಳ ಲಾಭ | 1.03 ಕೋಟಿ |

### ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸ್ವಂತ ನಿಧಿ | 35 |
| ಒಟ್ಟು ಠೇವಣಿ | 153 |
| ಸಾಲ ಮತ್ತು ಮುಂಗಡಗಳು | 108 |
| ಒಟ್ಟು ಎನ್‌ಪಿಎ ಅನುಪಾತ | 0.78% |
| ನೆಟ್ ಎನ್‌ಪಿಎ ಅನುಪಾತ | 0.00% |
| ನಿವ್ವಳ ಲಾಭ | 4.12 |
| ಒಟ್ಟು ವಹಿವಾಟು | 261 |
| ಹೂಡಿಕೆಗಳು | 62 |
| ಸಿಆರ್‌ಎಆರ್ | 24.8% |

### ಜನತಾ ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸಾಲ ಮತ್ತು ಮುಂಗಡಗಳು | 52.17 |
| ದುಡಿಯುವ ಬಂಡವಾಳ | 63.42 |
| ಒಟ್ಟು ವ್ಯವಹಾರ | 100.08 |
| ನಿವ್ವಳ ಲಾಭ | 2.31 |
| ಒಟ್ಟು ಠೇವಣಿ | 47.90 |

### ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಲಿ., ಗಂಗೊಳ್ಳಿ

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ನಿವ್ವಳ ಲಾಭ | 1.006 |
| ಠೇವಣಿಗಳು | 52.46 |
| ಸದಸ್ಯರ ಸಾಲಗಳು | 46.53 |
| ನಿಧಿಗಳು | 4.29 |
| ಪಡಕೊಂಡ ಸಾಲ | 7.46 |
| ಹೂಡಿಕೆಗಳು | 19.50 |
| ಪಾಲು ಬಂಡವಾಳ | 2.29 |
| ಬ್ಯಾಂಕ್ ಖಾತೆಗಳಲ್ಲಿ | 5.33 |

### ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಸದಸ್ಯರು | 28,302 |
| ಸಾಲ | 158 |
| ಠೇವಣಿ | 217 |
| ಪಾಲು ಬಂಡವಾಳ | 160.54 |
| ಸ್ವಸಹಾಯ ಗುಂಪುಗಳು | 5480 |
| ನಿವ್ವಳ ಲಾಭ | 2.58 |
| ಒಟ್ಟು ವ್ಯವಹಾರ | 375 |

## ಇ-ಸ್ಟಾಂಪಿಂಗ್ ಉದ್ಘಾಟನೆ

**ಕೊಡಗು :** ಕೊಡವ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್ ಸಾರ್ವಜನಿಕರ ಉಪಯೋಗಕ್ಕಾಗಿ ಇ-ಸ್ಟಾಂಪಿಂಗ್ ವ್ಯವಸ್ಥೆ ಜಾರಿಗೊಳಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ನೆಲ್ಲಮಕ್ಕಡ ಉಮೇಶ ಮುತ್ತಣ್ಣ ಹೇಳಿದರು.

ವಿರಾಜಪೇಟೆಯ ಕೇಂದ್ರ ಕಛೇರಿಯಲ್ಲಿ ಇ-ಸ್ಟಾಂಪಿಂಗ್ ವ್ಯವಸ್ಥೆಯಲ್ಲಿ ಉದ್ಘಾಟಿಸಿ ಮಾತನಾಡಿ 2019 ಸೆಪ್ಟೆಂಬರ್ ನಲ್ಲಿ ಪ್ರಾರಂಭಗೊಂಡ ಈ ಸಂಸ್ಥೆಯಲ್ಲಿ ಒಟ್ಟು 1200 ಸದಸ್ಯರಿದ್ದಾರೆ. 2021-22 ಸಾಲಿನಲ್ಲಿ 53.20 ಲಕ್ಷ ರೂ. ಪಾಲು ಬಂಡವಾಳ ಇದರೆ. ವಿವಿಧ ಠೇವಣಿಗಳಿಂದ 432 ಲಕ್ಷ ರೂ ಸಂಗ್ರಹಣೆ ಮಾಡಲಾಗಿದೆ. ಸದಸ್ಯರಿಗೆ 300 ಲಕ್ಷ ರೂ. ಸಾಲ ವಿತರಿಸಲಾಗಿದೆ. ಕೊಡಗು ಡಿಸಿಸಿ ಬ್ಯಾಂಕ್ ನಲ್ಲಿ 160 ಲಕ್ಷ ಹೂಡಿಕೆ ಮಾಡಲಾಗಿದೆ. ಈ ಸಹಕಾರಿಯು ಸಂಪೂರ್ಣ ಗಣಕಿಕೃತವಾಗಿದ್ದು, ಗ್ರಾಹಕರ ಅನುಕೂಲಕ್ಕಾಗಿ ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯಗಳನ್ನು ಅಲವಡಿಸಲಾಗಿದೆ. ಎಂದು ಹೇಳಿದರು.

ಉಪಾಧ್ಯಕ್ಷ ಚೇಂದಂಡ ವಸಂತ್ ಕುಮಾರ್, ನಿರ್ದೇಶಕರಾದ ಕಾಂಡಂಡ ಚರ್ಮಣ, ನೆಲ್ಲಚಂಡ ಭೀಮಯ್ಯ ವಾಂಚಿರ ನಾಣಯ್ಯ, ವಾಟೇರಿರ ಪೂವಯ್ಯ, ಪರದಂಡ ಮುತ್ತಣ್ಣ ಸೋಮಣ್ಣ ಚೇಂದ್ರಿಮಾಡ ನಂಜಪ್ಪ, ಕಬಳಪಂಡ ವಿಶ್ವನಾಥ್, ಕೊಂಗಂಡ ನಾಣಯ್ಯ, ಕಾಳೇಂಗಡ ತಿಮ್ಮಯ್ಯ, ಮೇಕೇರಿರ ಪಾಲಿ ಸುಬ್ರಮಣೀ, ಪಟ್ಟಡ ದಿವ್ಯ, ನೆಲ್ಲಮಕ್ಕಡ ಬೆಳ್ಯಪ್ಪ, ಕಾರ್ಯನಿರ್ವಾಹಣಾಧಿಕಾರಿ ಮುಕ್ಕಾಟಿರ ಅಕ್ಕಮ್ಮ, ಪಟ್ಟಡ ಟೀನಾ ಮತ್ತಿತರರು ಹಾಜರಿದ್ದರು.

## ಸುಕೋ ಬ್ಯಾಂಕು : ಶೂನ್ಯ ಎನ್‌ಪಿಎ ಸಾಧನೆ – 4.74 ಕೋಟಿ ಲಾಭಗಳಿಕೆ

**ಬಳ್ಳಾರಿ :** ಸಹಕಾರಿ ಕ್ಷೇತ್ರದ ಅಗ್ರಗಣ್ಯ ಬ್ಯಾಂಕು ಆಗಿರುವ ಸುಕೋ ಬ್ಯಾಂಕು 2021–22ರ ಆರ್ಥಿಕ ಸಾಲಿನಲ್ಲಿ ಒಟ್ಟು 1309 ಕೋಟಿ ರೂಪಾಯಿ ವಹಿವಾಟು ನಡೆಸಿ 4.74 ಕೋಟಿ ರೂಪಾಯಿ ನಿವ್ವಳ ಲಾಭಗಳಿಸಿ ನಿವ್ವಳ ಶೂನ್ಯ (ಶೇ.0) ಎನ್‌ಪಿಎ (NPA) ಹೊಂದುವ ಮೂಲಕ ಮಹತ್ತರ ಸಾಧನೆ ಮಾಡಿದೆ. ಸುಕೋ ಬ್ಯಾಂಕಿನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ಕೇಂದ್ರ ಕಚೇರಿಯಲ್ಲಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿ, ಬ್ಯಾಂಕು ಒಟ್ಟು 2.8 ಕೋಟಿ ರೂಪಾಯಿ ತೆರಿಗೆ ಪಾವತಿಸಿದೆ. ತೆರಿಗೆ ಪಾವತಿಸಿದ ನಂತರ ಒಟ್ಟು 4.74 ಕೋಟಿ ರೂಪಾಯಿ ಲಾಭ ಗಳಿಸಿದೆ ಎಂದರು.ಸುಕೋ ಬ್ಯಾಂಕ್ ಒಟ್ಟು 821 ಕೋಟಿ ರೂಪಾಯಿ ಠೇವಣಿ ಸಂಗ್ರಹ ಮಾಡಿ, ಒಟ್ಟು 488 ಕೋಟಿ ರೂಪಾಯಿ ಸಾಲ ವಿತರಣೆ ಮಾಡಿದೆ. ಬ್ಯಾಂಕಿನ ಎನ್‌ಪಿಎ (NPA – ಅನುತ್ಪಾದಕ ಆಸ್ತಿ) ಶೂನ್ಯ ಆಗಿರುವುದು ವಿಶೇಷ ಸಾಧನೆ ಎಂದರು.

ಸಂಕಷ್ಟದಲ್ಲಿದ್ದ ಬಳ್ಳಾರಿಯ ಮಹಿಳಾ ಶಕ್ತಿ ಕೋ ಆಪರೇಟಿವ್ ಬ್ಯಾಂಕು, ಹುಬ್ಬಳ್ಳಿಯ ವರ್ಧಮಾನ್ ಕೋ ಆಪರೇಟಿವ್ ಬ್ಯಾಂಕು ಮತ್ತು ಕಾರಟಗಿಯ ಶ್ರೀ ಶರಣಬಸವೇಶ್ವರ ಪಟ್ಟಣ ಸಹಕಾರಿ ಬ್ಯಾಂಕನ್ನು ನಮ್ಮ ಬ್ಯಾಂಕಿನಲ್ಲಿ ವಿಲೀನ ಮಾಡಿಕೊಳ್ಳಲಾಗಿದೆ.

ಈ ಮೂಲಕ ಮೂರು ಸಹಕಾರಿ ಬ್ಯಾಂಕುಗಳನ್ನು ತನ್ನಲ್ಲಿ ವಿಲೀನ ಮಾಡಿಕೊಂಡು ಗ್ರಾಹಕರ ಮತ್ತು ಷೇರುದಾರರ ಹಿತಾಸಕ್ತಿ ಕಾಪಾಡಿದ ಕರ್ನಾಟಕದ ಏಕೈಕ ಸಹಕಾರಿ ಬ್ಯಾಂಕು ಎನ್ನುವ ದಾಖಲೆಯನ್ನು ಸುಕೋ ಬ್ಯಾಂಕು ಹೊಂದಿದೆ ಎಂದರು.

ಪ್ರಸ್ತುತ ಕರ್ನಾಟಕದ 17 ಜಿಲ್ಲೆಗಳಲ್ಲಿ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಹೊಂದಿದ್ದು, 12 ಜಿಲ್ಲೆಗಳಲ್ಲಿ 29 ಶಾಖೆಗಳನ್ನು ಹೊಂದಿದೆ. ಆರ್‌ಬಿಐ (RBI) ನಿಂದ ಸ್ವತಂತ್ರ ಐಎಫ್‌ಎಸ್‌ಸಿ (IFSC) ಕೋಡ್ ಹೊಂದಿದ ಉತ್ತರ ಕರ್ನಾಟಕದ ಪ್ರಪ್ರಥಮ ಸಹಕಾರಿ ಬ್ಯಾಂಕು ಸುಕೋ ಬ್ಯಾಂಕು ಆಗಿದೆ.

ಏಪ್ರಿಲ್ 2022 ರಿಂದ ಆನ್‌ಲೈನ್‌ನಲ್ಲಿ ಸಾಲದ ಅರ್ಜಿಯನ್ನು ಪಡೆದು ತ್ವರಿತವಾಗಿ ಸಾಲ ಮಂಜೂರು ಮಾಡುವ ಹೊಸ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಆನ್‌ಲೈನ್‌ನಲ್ಲಿ ಸಾಲದ ಅರ್ಜಿ ಪಡೆದು ಸಾಲ ಮಂಜೂರು ಮಾಡುವ ಕರ್ನಾಟಕದ ಪ್ರಪ್ರಥಮ ಸಹಕಾರಿ ಬ್ಯಾಂಕು ಸುಕೋ ಬ್ಯಾಂಕು ಆಗಿದೆ ಎಂದರು.

ಮಾರುಕಟ್ಟೆಯ ಏರುಪೇರುಗಳು ಮತ್ತು ಆರ್ಥಿಕ ಕ್ಷೇತ್ರದ ಮೇಲೆ ಕೋವಿಡ್ – 19ರ ಪರಿಣಾಮಗಳ ಮಧ್ಯೆಯೂ ಸುಕೋ ಬ್ಯಾಂಕ್ ಉತ್ತಮ ಪ್ರಗತಿಯನ್ನು ಸಾಧಿಸಿದೆ. ಗ್ರಾಹಕರು ಮತ್ತು ಷೇರುದಾರರು ಬ್ಯಾಂಕಿನ ಮೇಲೆ ಹೊಂದಿರುವ ವಿಶ್ವಾಸ ಮತ್ತು ನಂಬಿಕೆಯನ್ನು ಈ ಸಾಧನೆ ಸಾಕ್ಷೀಕರಿಸುತ್ತದೆ ಎಂದು ಅವರು ಹೇಳಿದರು. ಬ್ಯಾಂಕಿನ ಈ ಸಾಧನೆಯಲ್ಲಿ ಪಾಲ್ಗೊಂಡಿರುವ ಷೇರುದಾರರು, ಗ್ರಾಹಕರು, ಸಿಬ್ಬಂದಿಗಳು ಮತ್ತು ಹಿತೈಷಿಗಳಿಗೆ ಧನ್ಯವಾದಗಳು ಎಂದು ಹೇಳಿದರು.

ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಎಂ.ಆರ್. ಗಿರೀಶ್ ಮತ್ತು ಆಡಳಿತ ಮಂಡಳಿ ಕಾರ್ಯದರ್ಶಿ ವೆಂಕಟೇಶರಾವ್ ಅವರು ಉಪಸ್ಥಿತರಿದ್ದರು

## ಸುವರ್ಣ ಮಹೋತ್ಸವ

**ಮಂಗಳೂರು :** ದಿನಾಂಕ 27.02.2022 ರಂದು ಮಂಗಳೂರು ಸೌಹಾರ್ದ ಸಹಕಾರಿಯ ಸುವರ್ಣ ಮಹೋತ್ಸವವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ. ಭಾಸ್ಕರ್ ರಾವ್ (ಮಾಜಿ ಕಾರ್ಪೋರೇಟರ್) ಇವರ ಅಧ್ಯಕ್ಷತೆಯಲ್ಲಿ ರಾಧಾಕೃಷ್ಣ ದೇವಸ್ಥಾನ ಸಭಾಂಗಣದಲ್ಲಿ ನೆರವೇರಿಸಲಾಯಿತು. ಮುಖ್ಯ ಅತಿಥಿಗಳಾಗಿ ಎಂ.ಎಲ್.ಎ ಶ್ರೀ ಪ್ರತಾಪ್ ಸಿಂಹ ನಾಯಕ್, ಎಂ.ಎಲ್.ಎ ವೇದವ್ಯಾಸ ಕಾಮಾತ್, ಇನ್‌ಲ್ಯಾಂಡ್ ಬಿಲ್ಡರ್ಸ್‌ನ ಎಂ.ಡಿ ಸಿರಾಜ್, ಕಾವುಬೈಲ್ ದೇವಸ್ಥಾನ ಟ್ರಸ್ಟಿ ಶ್ರೀ ಪ್ರಭಾಕರ ಶ್ರೀಯಾನ್, ವಿಕಾಶ್ ಕಾಲೇಜ್ ಟ್ರಸ್ಟಿ ಜಿ. ಕೊರಗಪ್ಪ, ಮೇಘ ಏಸೋಸಿಯೇಟ್ಸ್‌ನ ಸತೀಶ್ ರಾವ್, ಸಹಕಾರ ಇಲಾಖಾ ನಿವೃತ್ತ ಅಧಿಕಾರಿ ಬಿ.ಪಿ ಆಚಾರ್ ಭಾಗವಹಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು

## ಸನ್ಮಾನ

**ಶಿವಮೊಗ್ಗ :** ದಿನಾಂಕ 28–03–2022ರ ಸೋಮವಾರದಂದು ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಶಿವಮೊಗ್ಗ ಹಾಗೂ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಇವರ ವತಿಯಿಂದ 2021–22ನೇ ಸಾಲಿನ ಸಹಕಾರ ರತ್ನ ಪುರಸ್ಕೃತರಾದ ಶ್ರೀ ಹೆಚ್.ಎಸ್ ಮಂಜಪ್ಪ ಇವರಿಗೆ ಸನ್ಮಾನ ಮಾಡಲಾಯಿತು. ಈ ಸಂದರ್ಭದಲ್ಲಿ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್ ಪ್ರಸನ್ನಕುಮಾರ್, ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಹರಿಕೃಷ್ಣ ಯು, ನಿರ್ದೇಶಕರಾದ ಶ್ರೀ ಬಾಲಕೃಷ್ಣ ಟಿ.ಎಸ್ ಹಾಗೂ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣಮೂರ್ತಿ ಎಸ್.ಎ, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಗಣೇಶ್ ಭಟ್ ಹಾಗೂ ನಿರ್ದೇಶಕರಾದ ಶ್ರೀ ಕುಲಕರ್ಣಿ ಸಿ.ಎಂ ಇವರುಗಳು ಹಾಜರಿದ್ದರು.

# ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



**ಬೆಳಗಾವಿ :** ಶ್ರೀ ಕೆ.ಪಿ ಮಗೆಣ್ಣವರ ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಮಾಂಜರಿ ತಾ. ಚಿಕ್ಕೋಡಿ ಜಿ. ಬೆಳಗಾವಿ ಇದರ ಅಧ್ಯಕ್ಷರಾಗಿ ಶ್ರೀ ಸತೀಶ ಕಲ್ಲಪ್ಪಾ ಮಗೆಣ್ಣವರ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಸದಾಶಿವ ಮಹಾಲಿಂಗ ಹಾಗೂ ನಿರ್ದೇಶಕರಾಗಿ ಶ್ರೀ ಕಲ್ಲಪ್ಪಾ ಮಗೆಣ್ಣವರ, ಶ್ರೀ ಜಿನ್ನಪ್ಪಾ ಶೇಸಬಾಳೆ, ಶ್ರೀ ಅಶೋಕ ಚಿಮಾಯಿ, ಶ್ರೀ ಸಂಜಯ ಪಾಟೀಲ, ಶ್ರೀ ಭೀಮ ಬೊಲೆ, ಶ್ರೀ ಅಪ್ಪಾಸಾಹೇಬ ಜಮದಾಡೆ, ಶ್ರೀ ನೇಮಿನಾಥ ಪಟ್ಟಣಕುಡೆ, ಶ್ರೀ ವಿಲಾಸ ಚವ್ಹಾಣ, ಶ್ರೀ ಸುರಗೌಡ ಪಾಟೀಲ, ಸೌ. ಸರಿತಾ ಮಂಗಸೂಳೆ, ಸೌ ಬೇಬಿತಾಯಿ ಕೋರಿವಾಲೆ, ಶ್ರೀ ಇಲಿಯಾಸ ಮುಲ್ಲಾ, ಶ್ರೀ ಸುಭಾಷ ಮಗೆಣ್ಣವರ ಹಾಗೂ ಶ್ರೀ ದತ್ತು ಬಾನೆ ಇವರು ಆಯ್ಕೆಯಾಗಿರುತ್ತಾರೆ.



ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಲಿಮಿಟೆಡ್ ಸಹಕಾರಿಯ 2022–27 ಅವಧಿಯ ಆಡಳಿತ ಮಂಡಳಿ ಚುನಾವಣಾ ಪ್ರಕ್ರಿಯೆ ಮುಗಿದಿದ್ದು ನಿರ್ದೇಶಕರು ದಿನಾಂಕ 07.03.2022ರಂದು ಮತ್ತು ಪದಾಧಿಕಾ–ರಿಗಳು ದಿನಾಂಕ 10.03.2022ರಂದು ಅವಿರೋಧವಾಗಿ ಶ್ರೀಮತಿ ಬಿ ಎನ್ ನಾಗಮಣಿ (ಅಧ್ಯಕ್ಷರು) ಶ್ರೀಮತಿ ವಿಜಯಲಕ್ಷ್ಮಿ ವಾಸುದೇವ್ (ಉಪಾಧ್ಯಕ್ಷರು) ನಿರ್ದೇಶಕರಾಗಿ ಶ್ರೀಮತಿ ವೈ ಎನ್ ರಂಗಮಣಿ, ಶ್ರೀಮತಿ ಕೆ ನಳಿನ, ಶ್ರೀಮತಿ ಜಯಂತಿ ವಿ ರಾವ್, ಶ್ರೀಮತಿ ಎ ಎಲ್ ಲವಣ್ಯ, ಶ್ರೀಮತಿ ಡಾ. ರಶ್ಮಿ ವಿ ಭಟ್, ಶ್ರೀಮತಿ ವೈಶಾಲಿ ಎಚ್ ಎನ್, ಶ್ರೀಮತಿ ಅಪೂರ್ವ ಕೆ ಕೆ ಇವರು ಆಯ್ಕೆಯಾಗಿದ್ದಾರೆ.

## ಬಾಲಾಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹೊಸಪೇಟೆ



ಶ್ರೀ ಪಿ ಗೋಪಾಲಕೃಷ್ಣ
ಅಧ್ಯಕ್ಷರು



ಶ್ರೀಮತಿ ಎಂ. ರಾಜೇಶ್ವರಿ
ಉಪಾಧ್ಯಕ್ಷರು

## ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು.



ಶ್ರೀ ಹೆಚ್.ಎನ್ ನವೀನ
ಅಧ್ಯಕ್ಷರು



ಶ್ರೀ ಜೆ.ಎಸ್ ಸುನೀಲ್
ಉಪಾಧ್ಯಕ್ಷರು

## ಶ್ರೀ ಕನ್ನಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ



ಶ್ರೀ ಎಂ. ಹೆಚ್. ಪ್ರಾಣೇಶ್
ಅಧ್ಯಕ್ಷರು



ಶ್ರೀ ಟಿ. ಬದರಿನಾಥ್
ಉಪಾಧ್ಯಕ್ಷರು

ಭಾಗ್ಯಲಕ್ಷ್ಮೀ ವಿವಿದೊದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಹಕಾರಿಯ ಮಹಿಳಾ ಸದಸ್ಯರಾದ ಶ್ರೀಮತಿ ಲಕ್ಷ್ಮೀ ಕೆ ಹೊಸಮಠ, ಗಂಗವ್ವ ವಾ ಗೊಂದಣ್ಣವರ ಶ್ರೀಮತಿ ಶಾಂತಾಬಾಯಿ ವ್ಹಿ ಪಾಟೀಲ ಶ್ರೀಮತಿ ಆಯ್ ಬಿ ಕಪ್ಪಲಿ, ಶ್ರೀಮತಿ ರೇಣುಕಾ ಆರ್ ಮಾಚೇನಹಳ್ಳಿ ಇವರ ಉಪಸ್ಥಿತಿಯಲ್ಲಿ ನಡೆಯಿತು.

**ಜೀವನ್ ಸೌಹಾರ್ದ ವಿವಿಧೋದ್ದೇಶ ಸಹಕಾರಿ ನಿಯಮಿತ, ಸಾಗರ, ಶಿವಮೊಗ್ಗ**



ಶ್ರೀ ಮಹಮ್ಮದ್ ಇಲಿಯಾಸ್
ಅಧ್ಯಕ್ಷರು



ಶ್ರೀ ನಾಗರಾಜ ನಾಯ್ಕ
ಉಪಾಧ್ಯಕ್ಷರು

**ಶ್ರೀ ಹೇಮಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ**



ಶ್ರೀ ಕೃಷ್ಣಪ್ಪ ಕೊಣ್ಣೂರ
ಅಧ್ಯಕ್ಷರು



ಶ್ರೀ ಬಸವಣ್ಣಯ್ಯ ಜವಳಿ
ಉಪಾಧ್ಯಕ್ಷರು

**ನವಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್, ಹೊಸಪೇಟೆ**



ಶ್ರೀ ಕೆ. ವೀರಪ್ಪ
ಅಧ್ಯಕ್ಷರು



ಶ್ರೀಮತಿ ಮಂಜುಳಾ ಕೆ. ಶಿವಪೂಜಿ,
ಉಪಾಧ್ಯಕ್ಷರು



**ಹೊಸಪೇಟೆ** : ಪ್ರಗತಿ ಕೃಷ್ಣ ಸೌಹಾರ್ದ ಪತ್ತಿನ ಸಹಕಾರಿಯ ನೂತನ ಅಧ್ಯಕ್ಷರಾಗಿ ಶ್ರೀ ಭರಮಪ್ಪ ಜಿ ರವರು, ಉಪಾಧ್ಯಕ್ಷರಾದ ಶ್ರೀ ಬಿ ಎಂ ಪ್ರಭುದೇವ ರವರು ಹಾಗೂ ನಿರ್ದೇಶಕರಾಗಿ ಶ್ರೀ ಗುರಿಕಾರ ಭರಮಪ್ಪ, ಶ್ರೀ ಬಿ.ಎಂ.ಪ್ರಭುದೇವ, ಶ್ರೀ ಎಂ.ಪ್ರಕಾಶ್, ಶ್ರೀ ಕೆ.ಎನ್.ಪ್ರಸಾದ್, ಶ್ರೀಮತಿ ಶಕುಂತಲ, ಶ್ರೀ ಎಚ್.ಕೆ. ಶ್ಯಾಮ್ ಸುಂದರ್, ಶ್ರೀ ಕೃಷ್ಣಮೂರ್ತಿ, ಶ್ರೀಮತಿ ಶಶಿಕಲಾ, ಶ್ರೀಮತಿ ಡಿ. ಕಾಮಾಕ್ಷಮ್ಮ, ಶ್ರೀ ವಿರೂಪಾಕ್ಷಯ್ಯ. ಎಂ. ಎಂ. ಶ್ರೀ ಶ್ರೀನಿವಾಸನ್ ವಿ, ಶ್ರೀ ವಿರೂಪಾಕ್ಷಪ್ಪ.ಬಿರಾದರ್, ಶ್ರೀ ರಾಜಕುಮಾರ.ಜಿ, ಶ್ರೀ ಲಕ್ಷ್ಮಣರಾವ್. ಜಿ, ಶ್ರೀ ಭೀಮಸೇನ.ಎಂ, ಶ್ರೀ ಜಗನ್ನಾಥ ರಾವ್.ಎಂ, ಶ್ರೀ ಜನಾರ್ಧನ ರಾವ್ ಚವ್ಹಾಣ ಇವರು ಆಯ್ಕೆಯಾಗಿರುತ್ತಾರೆ.



**ವಿಜಯಪುರ :** ಶ್ರೀ ವರಮಹಾಲಕ್ಷ್ಮೀ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯು 08.03.2022 ರಂದು ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಮಹಾದೇವಿ ಬಿದರಕುಂದಿ ವಹಿಸಿದರು. ಹಾಗೂ ಡಾ॥ ರೇಖಾ ಉದಗಿರಿ, ಪ್ರಾಧ್ಯಾಪಕರು, ಮಹಿಳೆಯರ ಆರೋಗ್ಯದ ಬಗ್ಗೆ ಮಾತನಾಡಿದರು. ಶ್ರೀಮತಿ ವಾಣಿಶ್ರೀ ನಿಂಬ್ಯಾ ಇವರು ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಸಿಗುವ ಸಾಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ನಂತರ ಶಿವಾನಂದ ಮಠದವರು ಉಳಿತಾಯದ ಬಗ್ಗೆ ವಿವರಣೆ ಕೊಟ್ಟರು.

**ಗದಗ :** ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ನಮ್ಮ ಸಹಕಾರಿಯ ಸಂಘದಲ್ಲಿ ಏರ್ಪಡಿಸಿದ್ದೇವೆ ಇದರಲ್ಲಿ ನಮ್ಮ ಸಹಕಾರಿಯ ಮಹಿಳಾ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಇದರಲ್ಲಿ ಪ್ರತಿಯೊಬ್ಬ ಮಹಿಳೆರು ತಮ್ಮ ತಮ್ಮ ಅನಿಸಿಕೆಗಳ ಹಂಚಿಕೊಂಡರು ಇಂದಿನ ದಿನಮಾನಗಳಲ್ಲಿ ಮಹಿಳೆಯವರಿಗೆ ಸಿಗುವ ಸೌಲಭ್ಯ ವಿವರಿಸಿದು ಪ್ರತಿಯೊಬ್ಬ ಮಹಿಳೆ ಸ್ವತಂತ್ರವಾಗಿ ಸ್ವಾವಲಂಬಿಯಾಗಿ ಇರಲು ಇಚ್ಛಿಸಿದರು ಒಂದೇ ಅರ್ಥದಲ್ಲಿ ಹೇಳುವದಾದರೆ ಇಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅನ್ನುವ ಬದಲು ಮಹಿಳಾ ಸ್ವತಂತ್ರ ದಿನಾಚರಣೆ ಹಬ್ಬದ ದಿನ ಎನ್ನಬಹುದು ಅಂತಾ ಕೂಡಿದ ಮಹಿಳಾ ಸದಸ್ಯರು ಹೇಳಿದರು.

## ಶ್ರೀ ಹೆಚ್.ಎಸ್ ಮಂಜಪ್ಪ ಇವರಿಗೆ ಸನ್ಮಾನ



**ಶಿವಮೊಗ್ಗ** : ದಿನಾಂಕ 28-03-2022ರ ಸೋಮವಾರದಂದು ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಶಿವಮೊಗ್ಗ ಹಾಗೂ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಇವರ ವತಿಯಿಂದ 2021-22ನೇ ಸಾಲಿನ ಸಹಕಾರ ರತ್ನ ಪುರಸ್ಕೃತರಾದ ಶ್ರೀ ಹೆಚ್.ಎಸ್ ಮಂಜಪ್ಪ ಇವರಿಗೆ ಸನ್ಮಾನ ಮಾಡಲಾಯಿತು. ಈ ಸಂದರ್ಭದಲ್ಲಿ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್ ಪ್ರಸನ್ನಕುಮಾರ್, ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಹರಿಕೃಷ್ಣ ಯು, ನಿರ್ದೇಶಕರಾದ ಶ್ರೀ ಬಾಲಕೃಷ್ಣ ಟಿ.ಎಸ್ ಹಾಗೂ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣಮೂರ್ತಿ ಎಸ್.ಎ, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಗಣೇಶ್ ಭಟ್ ಹಾಗೂ ನಿರ್ದೇಶಕರಾದ ಶ್ರೀ ಕುಲಕರ್ಣಿ ಸಿ.ಎಂ ಇವರುಗಳು ಹಾಜರಿದ್ದರು.


## ಪ್ರಥಮ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ





**ಮಂಡ್ಯ** : ನುಡಿ ಭಾರತಿ ಸೌಹಾರ್ದ ಸಹಕಾರಿ ಸಂಘ ನಿ., ಗುತ್ತಲು ರಸ್ತೆ, ಮಂಡ್ಯ ಇದರ ಪ್ರಥಮ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಮುಖ್ಯ ಪ್ರವರ್ತಕರಾದ ಶ್ರೀ ಎ.ಎಲ್ ಬಸವೇಗೌಡರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಬಿ.ಟಿ ಗುರುರಾಜ್, ಅಧ್ಯಕ್ಷರು, ಶ್ರೀ ವೀರ ಮಡಿವಾಳ ಮಾಚಿದೇವ ಸೌ.ಸ.ನಿ., ಮಂಡ್ಯ, ಶ್ರೀ ಉಮೇಶ್, ಉಪನ್ಯಾಸಕರು, ಮಂಡ್ಯ ಮತ್ತು ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿದ್ದರು. ಸಹಕಾರಿಯ ಪ್ರವರ್ತಕರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರು ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳು, ಸಹಕಾರಿಯ ನಿರ್ದೇಶಕರ ಹಕ್ಕು & ಕರ್ತವ್ಯಗಳ ಮಾಹಿತಿಯನ್ನು ನೀಡಿದರು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

**ಸಾಯಿ ಗಣೇಶ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್, ಉಡುಪಿ**



ಶ್ರೀ ಸಿ. ಆರ್ ಪೈ
ಅಧ್ಯಕ್ಷರು



ಶ್ರೀ ಎಚ್. ಆರ್. ಶೆಣೈ
ಉಪಾಧ್ಯಕ್ಷರು



**ಬಾಗಲಕೋಟೆ** : ಬಾಗಲಕೋಟೆ ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕರಾದ ಶ್ರೀ ಭೀಮನಗೌಡ ಹೊಸಮನಿಯವರು ಸೇವೆಯಿಂದ ನಿವೃತ್ತಿಯಾದರು. ಸದರಿಯರನ್ನು ಜಿಲ್ಲಾ ಸಂಯೋಜಕರು ಭೇಟಿ ಮಾಡಿ ತಮ್ಮ ಜೀವನ ಸುಖಕರವಾಗಿರಲಿ ಎಂದು ಶುಭಾಶಯ ಕೋರಿದರು.

# ಅನುಸರಿಸಿ ನಡೆಯುವುದು ...

– ಶ್ರೀ ಧೀರೇಂದ್ರ ನಾಗರಹಳ್ಳಿ

ನಾನು ಇತ್ತೀಚಿಗೆ ಒಂದು ಸಭೆಯಲ್ಲಿ ಭಾಗಿಯಾಗಿದ್ದಾಗ ನಡೆದ ಘಟನೆಯೇ ಈ ಒಂದು ಬರಹಕ್ಕೆ ಪ್ರೇರಣಾ ಬಿಂದು. ವೇದಿಕೆಯ ಮೇಲೆ ಆಸೀನರಾಗಿದ್ದ ಗಣ್ಯಮಾನ್ಯರ ಮಾತುಗಳಿಗೆ ಇಡೀ ಸಭೆಯೇ ಕರತಾಡನ ಮಾಡಿತು. ಆ ಕ್ಷಣದಲ್ಲಿ ಆಗಲೆ ತಮ್ಮ (ವೈಯಕ್ತಿಕ ಕಾರಣಗಳಿಗಾಗಿ) ಸಭೀಕರೊಬ್ಬರು ಎದ್ದು ಮನೆಗೆ ಹೊರಡಲು ಸಿದ್ಧರಾಗಿದ್ದರು. ಅವರು ಸಹಾ ಸಭಿಕರೆಲ್ಲರೂ ಕರ ತಾಡನ ಮಾಡಿದ್ದನ್ನು ಕೇಳಿಸಿಕೊಂಡು ತಮಗರಿವಿಲ್ಲದಂತೆ ಕರ ತಾಡನ ಮಾಡುತ್ತಲೆ ಹೊರನಡೆದರು. ಇಲ್ಲಿ ಗಮನಿಸ ಬೇಕಾದ ಒಂದು ವಿಷಯವೆಂದರೆ ತಮಗರಿವಿಲ್ಲದಂತೆ ಕರ ತಾಡನ ಮಾಡಿದ ಆ ವ್ಯಕ್ತಿ ಆಗಲೆ ಸಭೆಗೆ (ಅಕ್ಷರಶಃ) ಬೆನ್ನು ತೋರಿಸಿಯಾಗಿತ್ತು. ಅವರಿಗೆ ಸಭೆಯಲ್ಲಿ ಏನು ನಡೆಯತ್ತಿದೆ ಮತ್ತು ಗಣ್ಯಮಾನ್ಯರು ಎನ್ನನ್ನು ಮಾತನಾಡಿದರು ಎನ್ನುವ ಅರಿವೆ ಇರಲಿಲ್ಲ. ಆದರೂ ಸಭೆಯ ಜೊತೆಗೂಡಿ ತಾವು ಕರತಾಡನ ಮಾಡಿದರು. ಇದೆ ಅನುಸರಣೆ!

**ಅನುಸರಣೆ ಎನ್ನುವುದು ಒಂದು ಸಾಮಾಜಿಕ ಪ್ರಭಾವದ ಪ್ರಕ್ರಿಯೆ :** ಈ ಪ್ರಕ್ರಿಯೆಯ ವರ್ತನೆಗಳ ಬದಲಾವಣೆಯೊಂದಿಗೆ ವ್ಯಕ್ತಿಯು ತನ್ನ ದೃಷ್ಟಿಕೋನ ಅಥವಾ ವರ್ತನೆಗಳನ್ನು ಬದಲಾವಣೆ ಮಾಡಿ ಸಾಮಾಜಿಕ ರೂಡಿಯೊಳಗೆ ಒಂದಾಗಿರುವುದು ಎನ್ನುವುದನ್ನೇ ಅನುಸರಣೆ ಎನ್ನಬಹುದು.

ನಮ್ಮ ಜಾನಪದರಲ್ಲಿ ಒಂದು ಮಾತಿದೆ "ಹತ್ತರ ಕೋಟ ಹನ್ನೊಂದು ಪರಿಸೆ ಕೋಟ ಗೋವಿಂದ" ಅಂದರೆ ಹತ್ತು ಜನರೊಳಗೆ ಒಬ್ಬರಾಗಿ ಜಾತ್ರೆಯ ಗುಂಪಿನಲ್ಲಿ ಗೋವಿಂದ ಎಂದು ಬಿಟ್ಟರೆ ಸಾಕು, ಯಾವ ತಕರಾರು ವಾದ, ವಿವಾದಗಳು ತಲೆ ಮೇಲೆ ಬರುವುದಿಲ್ಲ. ಗುಂಪಿನಲ್ಲಿ ಉಳಿದವರ ಜೊತೆ ಅನಸುರಿಸಿ ನಡೆದರೆ (ನಮಗರಿವಿಲ್ಲದಂತೆ ಅಥವಾ ಕೆಲವೊಮ್ಮೆ ಪ್ರಜ್ಞಾ ಪೂರ್ವಕವಾಗಿಯೋ) ಸಾಕು!

ಪ್ರಮುಖವಾಗಿ ಎರಡು ತೆರೆನಾದ ಸಿದ್ಧಾಂತಗಳನ್ನು ಅನುಸರಣೆಯಲ್ಲಿ ಕಾಣುತ್ತೇವೆ:

**ಮಾಹಿತಿಯ ಪ್ರಭಾವ ಮತ್ತು ರೂಢಿಗತ ಪ್ರಭಾವ :**

**ಮಾಹಿತಿಯ ಪ್ರಭಾವ :** ಇದು ಒಂದು ತೆರೆನಾದ ಅನುಸರಣೆ. ಎಲ್ಲಿ ನಮಗೆ ಬೇರೆಯವರನ್ನು (ಮೂರನೆಯವರನ್ನು) ಮಾಹಿತಿಯ ಗಣಿಯನ್ನಾಗಿ ನಾವು ನೋಡಿರುತ್ತೇವೆ ಅಲ್ಲದೆ ಗೊಂದಲದ ಪರಿಸ್ಥಿತಿಯಲ್ಲಿ ಮೂರನೆಯವರು ಕೊಡುವ ವ್ಯಖ್ಯಾನ ಮತ್ತು ಅವರ ಅಭಿಪ್ರಾಯಗಳಿಗೆ ನಾವು ಮಣೆ ಹಾಕುತ್ತೇವೆ.

ಮಾಹಿತಿಯ ಪ್ರಭಾವಕ್ಕೆ ನಾವು ಈ ಕೆಳಗಿನ ಸಂದರ್ಭಗಳಲ್ಲಿ ಒಳಗಾಗುತ್ತೇವೆ:

– ನಮಗೆ ಗೊಂದಲ ಉಂಟಾದಾಗ – ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ

– ಕೊನೆಯದಾಗಿ ನಮ್ಮೆದುರಿನ ವ್ಯಕ್ತಿ ವಿಷಯಗಳಲ್ಲಿ ನೈಪುಣ್ಯತೆಯನ್ನು ಹೊಂದಿದ್ದರೆ

**ರೂಢಿಗತ ಪ್ರಭಾವ :** ಇದು ಒಂದು ತೆರೆನಾದ ಅನುಸರಣೆ. ಮೇಲೆ ಉಲ್ಲೇಖಿಸಿರುವ ಉದಾಹರಣೆಯನ್ನು ಮತ್ತೊಮ್ಮೆ ಗಮನಿಸಿ, ಅಲ್ಲಿ ಸಭಿಕರು ಗಣ್ಯ ಮಾನ್ಯರ ಮಾತಿಗೆ ತಮ್ಮ ಕರ ತಾಡನವನ್ನು ಮಾಡಿ ಮೆಚ್ಚುಗೆ ಸೂಚಿಸುತಿದ್ದಾರೆ.ಆದರೆ ಆಗಲೆ ಸಭೆಗೆ ಬೆನ್ನು ತೋರಿಸಿರುವ(ಅಕ್ಷರಶಃ) ಸಭಿಕರೊಬ್ಬರು ಸಹಾ ಸಭಿಕರ ಜೊತೆಗೂಡಿ ತಾವು ಸಹಾ ಕರತಾಡನ ಮಾಡಿದರು. (ವಾಸ್ತವವಾಗಿ ಅವರು ಸಭೆಯಲ್ಲಿ ಮಾತುಗಳನ್ನು ಆ ಕ್ಷಣದಲ್ಲಿ ಕೇಳಿಸಿಕೊಂಡಿಯೆ ಇರಲಿಲ್ಲ), ಇಲ್ಲಿ ಸಭೆಗೆ ಬೆನ್ನು ತೋರಿಸಿ ಹೊರ ಹೋಗುತ್ತಿರುವ ಸಭಿಕರು ಸಭೆಯ ರೂಢಿಗೆ ಒಳಗಾಗಿದ್ದಾರೆ. ಅಂದರೆ ಸಭೆಯ ಒಂದು ಗಿರಕಿಗೆ ಸಿಕ್ಕು ಬಿದ್ದು ತಾವು ಸಹಾ ಚಪ್ಪಾಳೆ ತಟ್ಟಿ ಇನ್ನಿತರೆ ಸಭಿಕರೊಂದಿಗೆ ಸೇರಿದ್ದಾರೆ.ಇಲ್ಲಿ ಒಂದು ಸೂಕ್ಷ್ಮವಿದೆ ನಾವು ರೂಢಿಗತವಾಗಿ ಪ್ರಭಾವಕ್ಕೆ ಒಳಗಾಗಿರುತ್ತೇವೆ ಅದು ಏಕೆ ಎಂದು ಗಮನಿಸಿದರೆ ನಾವು ಒಂದು ತಂಡದ ಸದಸ್ಯರಾಗಿ ಮುಂದುವರೆಯಲು ಮತ್ತು ಆ ಗುಂಪು ನಮ್ಮನ್ನು ತಮ್ಮೊಳಗಿನ ಒಬ್ಬ ಸದಸ್ಯನೆಂದು ಪರಿಗಣಿಸುವುದಕ್ಕಾಗಿ ರೂಢಿಗತ ಪ್ರಭಾವಕ್ಕೆ ಒಳಗಾಗಿರುತ್ತೇವೆ

**ಸಹಜವಾಗಿ ಇಲ್ಲಿ ನಮಗೆ ಮೂರು ತರಹದ ರೂಢಿಗಳು ಕಾಣಸಿಗುತ್ತವೆ**

- **ಆಣತಿಯ ರೂಢಿ :** ಕೆಲವು ಸಂದರ್ಬ/ಪರಿಸ್ಥಿತಿಗಳಲ್ಲಿ ಹೇಗೆ ವರ್ತಿಸಬೇಕು ಎನ್ನುವುದನ್ನು ಪೂರ್ವ ನಿರ್ಧಾರ ಮಾಡಲಾಗಿರುತ್ತದೆ. ಆಂದರೆ ಕೆಲವು ಸಮಾರಂಭಕ್ಕೆ ಹೋಗುವಾಗ ಇಂತಹದ್ದೆ ಬಟ್ಟೆಗಳನ್ನು ಹಾಕಿಕೊಳ್ಳಬೇಕೆಂದು ಪೂರ್ವ ನಿರ್ಧರಿಸಿರುತ್ತಾರೆ (ಕೆಲವೊಮ್ಮೆ ಅಣತಿಯೂ ಆಗ ಬಹುದು)
- **ವಿವರಣಾತ್ಮಕ ರೂಢಿ :** ಒಂದು ಅರ್ಥದಲ್ಲಿ ಇದು ಅಣತಿಯ ರೂಢಿಗೆ ವೈರುದ್ಧ ಸಿದ್ಧಾಂತವನ್ನು ಸ್ಫುರಿಸುತ್ತದೆ : ಇಲ್ಲಿ ಸಮಾರಂಭಗಳಲ್ಲಿ ಇಂತಹದ್ದೆ ಬಟ್ಟೆಗಳನ್ನು ಹಾಕಿಕೊಳ್ಳಬೇಕೆಂಬ ಪೂರ್ವ ನಿರ್ಧರಿಸಿರುತ್ತಾರೆ (ಕೆಲವೊಮ್ಮೆ ಅಣತಿಯೂ ಆಗ ಬಹುದು) ಇದ್ದರೂ ನಾವು ಸಮಾನ್ಯವಾಗಿ ಹೆಚ್ಚಿನ ಪ್ರತಿಶತ ಹೇಗೆ ವರ್ತಿಸುತ್ತಾರೊ ಅದನ್ನೊ ನೋಡಿ ನಾವು ವರ್ತಿಸುತ್ತೇವೆ.
- **ಸಾಂದರ್ಭಿಕ ರೂಢಿಗಳು :** ಕೆಲವೊಂದು ಪರಿಸ್ಥಿತಿಗೆ ಅನುಗುಣವಾಗಿ ನಮ್ಮ ವರ್ತನೆಗಳು ನಿರ್ಧಾರವಾಗುತ್ತವೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ನಾವು ಧ್ಯಾನ ಮಂದಿರಗಳಿಗೆ ಹೋದಾಗ ನಾವು ಸಹಾ ಅಲ್ಲಿ ನಿಶ್ಯಬ್ದದಿಂದ ಇರುತ್ತೇವೆ.

ಒಟ್ಟಾಗಿ ಈ ರೂಢಿಗತ ಪ್ರಭಾವನ್ನು ಗಮನಿಸಿದರೆ ನಮಗೆಲ್ಲರಿಗೂ ಒಂದು ಸೂಕ್ಷ್ಮ ಅರ್ಥವಾಗುತ್ತದೆ ಅದೆಂದರೆ ಇಲ್ಲಿ ನಾವು ಒಂದು ತಂಡದಲ್ಲಿ ನಾನು ಗುರುತಿಸಿಕೊಳ್ಳಲು ಹಪಾಹಪಿಸುತ್ತಿರುತ್ತೇನೆ ಏಕೆಂದರೆ ನಾನು ಸಹಾ ತಂಡದ ಇತರ ಸದಸ್ಯರಂತೆ ವರ್ತಿಸುತಿದ್ದೇನೆ.

**ರೂಢಿಗತ ಪ್ರಭಾವಕ್ಕೆ ನಾವು ಈ ಕೆಳಗಿನ ಸಂದರ್ಭಗಳಲ್ಲಿ ಒಳಗಾಗುತ್ತೇವೆ:**

– ನಾವು ನೋಡುತ್ತಿರುವ ಗುಂಪಿನ ಸಾಮರ್ಥ್ಯ ಮತ್ತು ನಮಗೆ ಆ ತಂಡದ ಪ್ರಾಮುಖ್ಯತೆ – ಆ ಕ್ಷಣದ ಗುಂಪಿನ ಸಾಮಿಪ್ಯ – ಕೊನೆಯದಾಗಿ ಗುಂಪಿನಲ್ಲಿರುವ ಸದಸ್ಯರ ಸಂಖ್ಯೆ

ನಾವು ಇನ್ನೊಬ್ಬರನ್ನು ಅನುಸರಿಸಿ ನಡೆಯುವದರ ಹಿಂದೆ ಇಷ್ಟೆಲ್ಲಾ ಸಿದ್ಧಾಂತವಿರುತ್ತದೆ, ಇದೆಲ್ಲವೂ ನಮಗರಿವಿಲ್ಲದಂತೆ ನಡೆದು ಹೋಗುತ್ತದೆ,

# ಶುಭಕೃತ ನಾಮ ಸಂವತ್ಸರ - ಸಮೃದ್ಧ ಸಹಕಾರದ ಯುಗ

– ಶ್ರೀಮತಿ ಸವಿತ ಎನ್.ಇ, ಕಿರಿಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಶತಾಯು: ವಜ್ರದೇಹಾಯ ಸರ್ವ ಸಂಪತ್ಕರಾಯಚ

ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ



ದಕ್ಷಿಣ ಭಾರತವನ್ನು ಆಳಿದ ಶಾಲಿವಾಹನನು ಚೈತ್ರ ಶುದ್ಧ ಪಾಡ್ಯಮಿಯಂದು ಶಾಲಿವಾಹನ ರಾಜ ಸಿಂಹಾಸನಾರೂಢನಾದನೆಂದೂ, ಆಗಿನಿಂದ ಶಾಲಿವಾಹನ ಶಕೆ ಆರಂಭವಾಯಿತೆಂದೂ ಹೇಳಲಾಗುತ್ತದೆ. ಹಿಂದುಗಳು ಶಾಲಿವಾಹನ ಶಕೆಯ ಸಂವತ್ಸರಗಳನ್ನಾಧರಿಸಿ ಆಯಾ ಸಂವತ್ಸರವನ್ನು ಚೈತ್ರ ಮಾಸದ ಪ್ರತಿಪದೆಯಿಂದ ಆರಂಭಿಸುವರು. ಯುಗಾದಿಯು ಚಂದ್ರಮಾನದ ಸಂವತ್ಸರದ ಆರಂಭದ ದಿನ.

ನಮ್ಮ ಹಿರಿಯರಿಂದ ಬಳುವಳಿಯಾಗಿ ಮರಗಳನ್ನು ಪಡೆದಂತೆ ಮುಂದಿನ ಪೀಳಿಗೆಯ ನೆಲೆಯಲ್ಲೂ ಗಿಡಗಳನ್ನು ಬೆಳೆಸಿ, ಮರಗಳನ್ನು ಬೆಳೆಸಿ ಪೋಷಿಸಿ ಹಸ್ತಾಂತರಿಸಬೇಕು. ದೇಶಕ್ಕೆ ಹೊಸ ದಿಸೆ, ದಿಕ್ಕು ತೋರಲಿದೆ. ಶುದ್ಧ, ಸಮೃದ್ಧ ಪರಿಸರದ ಯುಗ ಯುಗಾದಿಯಿಂದ ಆರಂಭವಾಗಲಿ ಪ್ರಕೃತಿಯ ಸಿರಿಮುಡಿಗೆ ಕಳೆ ಕಟ್ಟಿದೆ. ನವೋಲ್ಲಾಸ, ನವ ಚೈತನ್ಯ ತುಂಬಿಕೊಂಡಿದೆ. ಇದಕ್ಕೆಲ್ಲಾ ಕಾರಣ ಹಬ್ಬಗಳ ರಾಜ ಯುಗಾದಿಯ ಆಗಮನ. ಎತ್ತನೋಡಿದರತ್ತ ಮಾವು ಬೇವುಗಳು ಹಚ್ಚ ಹಸಿರನ್ನು ಹೊತ್ತು ಸ್ವಾಗತ ಕೋರುತಿವೆ. ನವ ವಸಂತನ ಆಗಮನಕ್ಕೆ ದುಂಬಿಯು ಝೇಂಕಾರಗೈಯುತಿದೆ. ಪ್ರಕೃತಿಯೇ ತೋರಣ ಕಟ್ಟಿ ಸಜ್ಜಾಗಿ ನಿಂತಿದೆ. ಭಾರತ ಬಹು ಸಂಸ್ಕೃತಿಗಳ ತವರೂರು. ಭಾರತೀಯ ಹಬ್ಬಗಳಲ್ಲಿ ಯುಗಾದಿಗೆ ವಿಶೇಷ ಸ್ಥಾನ. ವಸಂತ ಋತುವಿನ ಚೈತ್ರಮಾಸದಲ್ಲಿ ಮೈತಳೆದು ಬರುವ ಚಂದ್ರಮಾನ ಯುಗಾದಿಯು, ಇಡೀ ಸೃಷ್ಟಿಯಲ್ಲಿ ಹೊಸತನ ತುಂಬುವ ಹಬ್ಬ. ಶುಭಕೃನಾಮ ಸಂವತ್ಸರದ ಯುಗಾದಿ ಹಬ್ಬಕ್ಕೆ ವಿಶೇಷ ಮಾನ್ಯತೆ ಇದೆ.

"ಋತೂನಾಂ ಕುಸುಮಾಕರಂ" ಎಂಬ ಗೀತಾಚಾರ್ಯರು ಹೇಳುವಂತೆ ಋತುರಾಜ ವಸಂತದ ಶುಭಾಗಮನದ ದಿನವೇ ಯುಗಾದಿ. ಈ ಯುಗಾದಿಯ ಸಂಭ್ರಮ ನಿಜಕ್ಕೂ ಅವರ್ಣನೀಯ. 'ಯುಗ' ಎಂದರೆ ಸೃಷ್ಟಿ ಅಥವಾ ಕಾಲಘಟ್ಟ, 'ಆದಿ' ಎಂದರೆ ಪ್ರಾರಂಭ. ಯುಗಾದಿ ಇದರ ಅರ್ಥ ಸೃಷ್ಟಿಯ ಅಥವಾ ನೂತನ ಕಾಲಘಟ್ಟದ ಪ್ರಾರಂಭ ಎಂದಾಗುತ್ತದೆ. ವೈವಿಧ್ಯತೆಯಲ್ಲಿ ಏಕತೆಯ ಸಂದೇಶವನ್ನು ಇಡೀ ಜಗತ್ತಿಗೆ ಸಾರುವ ಭಾರತದೇಶದಲ್ಲಿ ಯುಗಾದಿ ಹಬ್ಬವನ್ನು ಬೇರೆ ಬೇರೆ ಕಡೆಯಲ್ಲಿ ಬೇರೆಬೇರೆ ಹೆಸರಿನಿಂದ ಕರೆಯಲಾಗುತ್ತದೆ. ಅಷ್ಟೇ ಅಲ್ಲದೇ ವಿಶಿಷ್ಟವಾಗಿ ಹಾಗೂ ವಿಭಿನ್ನವಾಗಿ ಯುಗಾದಿಯನ್ನು ಆಚರಿಸುವುದು ವಾಡಿಕೆ. ತ್ರಿಮೂರ್ತಿಗಳಲ್ಲಿ ಒಬ್ಬನಾದ ಸೃಷ್ಟಿಕರ್ತ ಬ್ರಹ್ಮದೇವನು, ಬ್ರಹ್ಮಾಂಡವನ್ನು ಸೃಷ್ಟಿಸಿದ ಅದ್ಭುತ ಸುದಿನವೇ ಈ ಯುಗಾದಿ. ಮರ್ಯಾದಾ ಪುರುಷೋತ್ತಮನಾದ ಶ್ರೀರಾಮಚಂದ್ರನು ಲಂಕಾಧೀಶ ರಾವಣನನ್ನು ತನ್ನ ದಿವ್ಯ ಸಾಮರ್ಥ್ಯದಿಂದ ಸಂಹರಿಸಿ, ಸೀತಾಮಾತೆಯ ಸಮೇತರಾಗಿ ಅಯೋಧ್ಯೆಗೆ ಆಗಮಿಸಿ, ಮರು ಪಟ್ಟಾಭಿಷಿಕ್ತನಾದ ಅಮೃತಗಳಿಗೆಯೇ ಈ ಯುಗಾದಿ ಹಬ್ಬ. ಯುಗಾದಿ ಅತೀಶ್ರೇಷ್ಠ ಮೂಹೂರ್ತ ಎಂದು ಭಾರತಿಯರು ನಂಬುತ್ತಾರೆ. ವರ್ಷದ ಶುಭ ದಿನವಾದ ಯುಗಾದಿ ಮಂಗಳ ಕಾರ್ಯವನ್ನು ಮಾಡಲು ಯೋಗ್ಯ ದಿನವೆಂದು ಹೇಳುವರು.

ಯುಗಾದಿ ದಿನವು ಬದಲಾವಣೆ ಮತ್ತು ಹೊಸತನದ ಸಂಕೇತ. ನೂತನ ವರ್ಷದ ಪ್ರಾರಂಭ ಯುಗಾದಿ ಹಬ್ಬ ಜನವರಿ ಒಂದನ್ನು ಹ್ಯಾಪಿ ನ್ಯೂ ಇಯರ್ ಎಂದು ಕುಣಿದು, ಕಿರುಚಾಡಿ ಹುಚ್ಚು ಹೊಳೆಯಲ್ಲಿ ತೇಲಾಡುವ ಈಗಿನ ತಲೆಮಾರುಗಳಿಗೆ ವಾಸ್ತವವಾಗಿ ನಮ್ಮ ನೂತನ ವರ್ಷದ ಪ್ರಾರಂಭ ಯುಗಾದಿ ಹಬ್ಬ ಎನ್ನುವ ಸತ್ಯಾಂಶದ ಅರಿವು ಅತಿ ಅಗತ್ಯವಾಗಿರಬೇಕು. ಪಾಶ್ಚಿಮಾತ್ಯರ ಅಂಧಾನುಕರಣೆ ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳಿಂದ ನಮ್ಮನ್ನ ದೂರಸರಿ ಸುತ್ತಿರುವುದು ದುರಂತವೇ ಸರಿ. ಬಾಲ್ಯದ ನಮ್ಮ ದಿನಗಳನ್ನು ಒಮ್ಮೆ ಮೆಲುಕು ಹಾಕಿ ನೋಡಿ, ಇಡೀ

31ನೇ ಪುಟಕ್ಕೆ.....

# ಸಂವಿಧಾನ ಶಿಲ್ಪಿಗೆ ನಮ್ಮದೊಂದು ಸಲಾಂ

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಕಾನೂನು ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತ.



ಅಂದಿನ ಸಮಾಜದ ಕಟ್ಟುಪಪಾಡುಗಳನ್ನು ಅರಿಯದ ಆಟೋಪಚಾರಗಳಲ್ಲಿ ಮಗ್ನರಾಗಿರುವ ಮೈದುಂಬಿ, ಮಂದಹಾಸದ ಬಾಲಕನಿಗೆ ಸುಮಾರು ಏಳೆಂಟು ವರ್ಷ ವಯಸ್ಸ ಆಗಿರಬಹುದು. ಆ ಬಾಲಕ ಒಂದು ದಿನ ತನ್ನ ತಂದೆಯನ್ನು ನೋಡಲು ಎತ್ತಿನ ಗಾಡಿಯಲ್ಲಿ ಕುಳಿತು ಸಾಗುತಿದ್ದ, ಗಾಡಿ ಸ್ವಲ್ಪ ದೂರ ಹೋಗುತಿದ್ದಂತೆ ಒಂದೆ ಸಮನೆ ಗಾಡಿಯನ್ನು ನಿಲ್ಲಿಸಿ ಆ ಪುಟ್ಟ ಬಾಲಕನನ್ನು ಕೆಳಕ್ಕೆ ತಳ್ಳಿ ಮುಂದೆ ಸಾಗಿಬಿಟ್ಟ, ಆ ಕ್ಷಣ ಆ ಪುಟ್ಟ ಹುಡಗನ ಮನಸ್ಸಿಗೆ ಅಘಾತವಾಯಿತು ಕಾರಣ ತಿಳಿಯುವಂತಹ ವಯಸ್ಸು ಇರಲಿಲ್ಲ. ಇನ್ನೊಮ್ಮೆ ಕೆರೆಯಲ್ಲಿ ನೀರು ಕುಡಿದ ಎಂಬ ಕಾರಣಕ್ಕೆ ಗ್ರಾಮಸ್ಥರೆಲ್ಲ ಸೇರಿ ಬಾಲಕನಿಗೆ ಥಳಿಸಿದರು, ಆಕಸ್ಮಿಕವಾಗಿ ಮಳೆ ಬಂದಿದರಿಂದ ರಸ್ತೆ ಬದಿಯಲ್ಲಿದ್ದ ಮನೆಯೊಂದರ ಜಗಲಿಯ ಮೇಲೆ ನಿಂತಿದಕ್ಕೆ ಮನೆಯ ಯಜಮಾನಿ ಕೋಪದಿಂದ ಜಗಲಿಯಿಂದ ತಳ್ಳಿದಳು, ಕ್ಷೌರಿಕ ಕ್ಷೌರ ಮಾಡದೆ ಹಿಂದಕ್ಕೆ ಕಳುಹಿಸಿದ, ಹೀಗೆ ಒಂದೇ ಎರಡೆ ನೂರಾರು ಅವಮಾನ, ಹಿಂಸೆ ಇನ್ನಿಲದಂತೆ ಕಾಡಿದಾಗ ನಾವು ಮನುಷ್ಯರೇ ಹಿಂದುಳಿದ ಜನಾಂಗದಲ್ಲಿ ಹುಟ್ಟಿದ್ದೇ ತಪ್ಪಾಯಿತಾ ಎಂಬ ಭಾವನೆ ಕಾಡಿದಾಗ ಅದಕ್ಕೆಲ್ಲ ಹೆದರಿ ಮುದರಿ ಕುಡದೆ ಅವುಗಳನ್ನು ಮೆಟ್ಟಿ ಕುಲುಮೆಯಲ್ಲಿ ಕಾಯಿಸಿದ ನಂತರ ಹೊಳೆಯುವ ಚಿನ್ನದ ಹಾಗೆ ಹೊಳೆದು ಇವತ್ತು ದೇಶ ಮರೆಯಲಾರದ ಚೇತನವಾಗಿ, ಸಂವಿಧಾನ ಶಿಲ್ಪಿಯಾಗಿ ಹೊರಹೊಮ್ಮಿದ ಬಾಲಕ ಅವರೆ ಭಾರತ ರತ್ನ ಡಾ. ಬಿ ಆರ್ ಅಂಬೇಡ್ಕರ.

ಡಾ. ಬಿ ಆರ್ ಅಂಬೇಡ್ಕರ ಜನಿಸಿದ್ದು ಸನ್ 1891 ಎಪ್ರಿಲ್ 14 ರಂದು ಮಹಾರಾಷ್ಟದ ರತ್ನಗಿರಿ ಜಿಲ್ಲೆಯ ಅಂಬೆವಾಡಿ ಗ್ರಾಮದ ಮಹರ ಎಂಬ ಜನಾಂಗದ ಸುಬೇದಾರ ರಾಮ ಜೀ ಸಕ್ಪಾಲ್ ಭಿಮಬಾಯಿ ಅವರ ಸುಪತ್ರರಾಗಿ ಜನಿಸಿದರು.

ಅಂದಿನ ದಿನಗಳಲ್ಲಿ ಹಿಂದುಳಿದ ಜಾತಿಯ ಬಾಲಕನೊಬ್ಬ ಶಾಲೆಗೆ ಹೋಗಿ ವಿದ್ಯಾಭ್ಯಾಸ ಕಲಿಯುವುದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ. ಆದರೆ ಅಂಬೇಡ್ಕರರಿಗೆ ಚಿಕ್ಕಂದಿನಿಂದಲೆ ಓದಬೇಕು ಏನನ್ನಾದರೂ ಸಾಧಿಸಬೇಕು ಎಂಬ ಛಲ ಇತ್ತು ಹಾಗೂ ಬಾಲ್ಯದಲ್ಲಿ ತಾನು ಅನುಭವಿಸಿದ ಅವಮಾನಗಳು ಮುಂದೆ ಹಿಂದುಳಿದ ಸಮಾಜ ಅವಮಾನವಾಗಬಾರದು ಅದಕ್ಕಾಗಿ ಎಂತಹ ಕಷ್ಟಗಳು ಬಂದರು ಸಹ ಎದುರಿಸಿ ಮುನ್ನುಗ್ಗಬೇಕು ಎಂದು ಧೃಡ ಮನಸ್ಸು ಮಾಡಿದ್ದರು. ಇದಕ್ಕೆ ಹೆತ್ತವರು ನೀರೆರೆದು ಪೋಷಿಸಿದರು. ಅಂಬೇಡ್ಕರರವರ ತಂದೆ ರಾಮ ಜೀ ಸಕ್ಪಾಲ್ ಬ್ರಿಟಿಷ್ ಸೈನ್ಯದಲ್ಲಿ ಸುಬೆದಾರರಾಗಿ ಸೇವೆ ಸಲ್ಲಿಸಿದ್ದರು. ಅವರು ಮರಾಠಿ ಹಾಗೂ ಇಂಗ್ಲೀಷ್ ಬಲ್ಲವರಾಗಿದ್ದರಿಂದ ಅವರು ತಮ್ಮ ಮಕ್ಕಳಿಗೆ, ಅದರಲ್ಲಿಯೂ ಮುಖ್ಯವಾಗಿ ಭಿಮರಾಯರಿಗೆ, ಸ್ವತಃ ಕಲಿಸಿ ಅವರ ಜ್ಞಾನಾರ್ಜನೆಯಲ್ಲಿ ಪ್ರೋತ್ಸಾಹಿಸಲು ಸಾದ್ಯವಾಯಿತು. ಭಿಮರಾವ ಪ್ರಾಥಮಿಕ ಶಿಕ್ಷಣ ಸಾತಾರದಲ್ಲಿ ಪ್ರಾರಂಭವಾಯಿತು. ಶಿಕ್ಷಕರಾದ ಕೃಷ್ಣಾಜಿ ಕೇಶವರಾವ ಅಂಬೆಡ್ಕರ ಪ್ರೋತ್ಸಹ ಸಹಕಾರ ದಿಂದ ಉತ್ತಮ ಅಭ್ಯಾಸ ಮಾಡಿ ಸನ್ 1907 ರಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆ ನಂತರ ಮುಂಬೈನಲ್ಲಿ ಎಲ್ಪಿನ್‌ಸ್ಟನ್ ಕಾಲೇಜನಲ್ಲಿ ಇಂಟರ್‌ಮೀಡಿಯಟ್ ಮುಗಿಸಿ ಸನ್ 1921 ರಲ್ಲಿ ಬಿಎ ಪದವಿಧರರಾದರು. ನಂತರ ಬರೋಡಾ ಮಹಾರಾಜರ ಸೈನ್ಯದಲ್ಲಿ ಲೆಪ್ಟಿನೆಂಟ್ ಆಗಿ ನೇಮಕಗೊಂಡರು. ಆದರೆ ಆಗ ಬರೋಡ ಮಹಾರಾಜರೇ ಇವರ ಬುದ್ದಿಶಕ್ತಿ ಮೆಚ್ಚಿ ವಿದೇಶದಲ್ಲಿ ವ್ಯಾಸಂಗ ಮಾಡಿ ಬಂದ ನಂತರ ಸುಮಾರು ಹತ್ತು ವರ್ಷಗಳ ಕಾಲ ಬರೋಡದಲ್ಲಿ ಕೆಲಸ ಮಾಡಬೇಕೆಂಬ ಕರಾರಿನೊಂದಿಗೆ ಉನ್ನತ ವ್ಯಾಸಂಗಕ್ಕೆ ಅಂಬೇಡ್ಕರರವರನ್ನು ವಿದೇಶಕ್ಕೆ ಕಳುಹಿಸಿದರು. ವಿದೇಶದಲ್ಲಿ ಎಂಎ ಪದವಿಯೋಡನೆ ಪಿಎಚ್‌ಡಿಯನ್ನು ಪಡೆದು 1917 ಕ್ಕೆ ಭಾರತಕ್ಕೆ ಮರಳಿದರು. ಇಷ್ಟಾದರೂ ಸಹ ಅವರ ಜ್ಞಾನದ ದಾಹ ಇಂಗಿರಲಿಲ್ಲ. ಮತ್ತೆ ಸನ್ 1920 ಕ್ಕೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಲಂಡನಕ್ಕೆ ತೆರಳಿ ಸನ್ 1922 ರಲ್ಲಿ ಬ್ಯಾರಿಸ್ಟರ್ ಪದವಿಯೊಡನೆ ಭಾರತಕ್ಕೆ ವಾಪಸಾದರು.

**ವೃತಿ ಜೀವನ**

ವಿದೇಶದಿಂದ ಭಾರತಕ್ಕೆ ಮರಳಿ ಮುಂಬೈನಲ್ಲಿ ನೆಲೆನಿಂತ ಅಂಬೇಡ್ಕರ ತಮ್ಮ ವೃತಿ ಜೀವನ ಪ್ರಾರಂಭಿಸಿದರು, ಅವರು ಕಾಲೇಜೊಂದರಲ್ಲಿ ಬೋದಿಸುತ್ತಲೇ, ವಿವಿದ ಸರಕಾರಿ ಸಂಸ್ಥೆಗಳಲ್ಲಿ ಸಾಕ್ಷ್ಯ ನೀಡುತ್ತಲೇ, ವೃತ ಪತ್ರಿಕೆ ನಡೆಸುತಿದ್ದರು. ಮುಂಬಾಯಿ ಲೆಜಿಸ್ಲೇಟಿವ ಕೌನ್ಸಿಲಿಗಗೆ

ನಾಮಕರಣಗೊಂಡು ಅಲ್ಲಿನ ಆಗುಹೋಗುಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಲೇ, ವಕೀಲ ವೃತಿಯನ್ನು ಪ್ರಾರಂಭಿಸಿದರು.

ಭಾರತದ ವಿವಿಧ ಪಂಗಡಗಳ ಮುಖಂಡರುಗಳು, ಮೂರು ಬ್ರಿಟಿಷ್ ರಾಜಕೀಯ ಪಕ್ಷಗಳು ಸೇರಿ, ಭಾರತದ ಬವಿಷ್ಯದ ಸಂವಿಧಾನದ ರೂಪ ರೇಷಗಳ ಬಗ್ಗೆ ಚರ್ಚೆ ನಡೆಸಲು ಲಂಡನನಲ್ಲಿ ಏರ್ಪಡಿಸಲಾಗಿದ್ದ ಮೂರು ದುಂಡು ಮೇಜಿನ ಪರಿಷತ್‌ಗಳಲ್ಲಿ ಭಾಗವಹಿಸಿದ್ದರು.

ವಿದೇಶದಿಂದ ಭ್ರಆತಕ್ಕೆ ಹಿಂದಿರುಗಿದ ಮರುವರ್ಷವೆ " ಬಹಿಷ್ಕೃತ ಹಿತಕಾರಿಣಿ ಸಭಾ" ಎಂಬ ದಲಿತ ವರ್ಗದ ಕಲ್ಯಾಣ ಸಣಸ್ಥೆಯನ್ನು ಹುಟ್ಟುಹಾಕಲು ಸಹಾಯ ಮಾಡಿದರು ಅಶ್ಪೃಶ್ಯ ಹಾಗೂ ಇತರೆ ಕೆಳವರ್ಗಗಳಲ್ಲಿ ವಿದ್ಯ ಮತ್ತು ಸಂಸ್ಕೃತಿಯ ಅರಿವು ಮೂಡಿಸುವುದು, ಅವರ ಜೀವನ ಮಟ್ಟವನ್ನು ಸುಧಾರಿಸುವುದು ಹಾಗೂ ಈ ವರ್ಗವು ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳಲು ಧ್ವನಿ ಕೊಡುವುದು ಈ ಸಂಸ್ಥೆಯ ಉದ್ದೇಶವಾಗಿತ್ತು. ಈ ಸಂಸ್ಥೆಯ ಮೂಲಕ ಅಸ್ಪೃಶ್ಯತೆ ವಿರುದ್ದ ಸಮಾನತೆಗಾಗಿ ಬೀದಿಗಿಳಿದು ಹಲವು ಹೋರಾಟ ಮಾಡುವ ಮೂಲಕ ದಲಿತರ ಪಾಲಿಗೆ ಅಕ್ಷರಶ: ದಾರಿದಿಪವಾದರು. ಇವರ ಚೌಡರ ಕೆರೆ ಚಳುವಳಿಯಂತೂ ಭಾರತದ ಇತಿಹಾಸದಲ್ಲಿ ದಾಖಲಿಸುವಂತಹದ್ದು ಹೀಗೆ ದಲಿತರ ಪರ ಕ್ರಾಂತಿ ಪ್ರಾರಂಭವಾಗಿ ನಿಧನವಾಗಿ ದೇಶದೆಲ್ಲಡೆ ಮೊಳತೊಡಗಿತ್ತು. ಈ ಸಂದರ್ಭದಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾಗಿತ್ತು ಆ ಸಂದರ್ಭದಲ್ಲಿ ಬ್ರೀಟಿಷರು ಕೆಲವು ಭಾರತೀಯರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡಾಗ ಪ್ರಥಮ ಪ್ರಾಶಸ್ತ್ಯದಲ್ಲಿ ಅಂಬೇಡ್ಕರರವರಿಗೆ ಸ್ಥಾನನ ದೊರಕಿತ್ತು. ಭಾರತ ಸ್ವಾತಂತ್ರ ಗಳಿಸಿದ ನಂತರ ನೆಹರೂ ಸರ್ಕಾರದಲ್ಲಿ ಪ್ರಥಮ ಕಾನೂನು ಸಚಿವರಾದ ಹೆಗ್ಗಳಿಕೆ ಹೊಂದಿದ್ದಾರೆ.

ಅಂಬೆಡ್ಕರ ಭಾರತ ದೇಶದ ಸಂವಿಧಾನದ ಕರುಡ ರಚನಾ ಸಮಿತಿ ಅಧ್ಯಕ್ಷರಾಗಿ ಸಶಕ್ತ ಸಂವಿಧಾನ ನೀಡಿದ ಶಿಲ್ಪಿಯಾದರು. ಇದು ಇಡಿ ವಿಶ್ವಕ್ಕೆ ಮಾದರಿ ಸಂವಿಧಾನವಾಗಿರುವುದು ಅಂಬೇಡ್ಕರವರಿಗೆ ಸಂದ ಮಹಾಗೌರವವಾಗಿದೆ ಅಂತಹ ಮಹಾಚೇತನ ಮೂರ್ತಿಗೆ ನಮ್ಮದೊಂದು ಸಲಾಂ.

.....29ನೇ ಪುಟದಿಂದ

ಮನೆಯಲ್ಲಿ ಹಬ್ಬದ ಪೂರ್ವ ತಯಾರಿಗಳು, ಹಬ್ಬದ ದಿನ ಬಂಧುಬಾಂಧವರ ಸಮಾಗಮ, ಮುಂಜಾನೆಯಿಂದಲೇ ಹೊಸಬಟ್ಟೆ ತೊಟ್ಟು ಕುಣಿದು ಸಂಭ್ರಮಿಸುವ ಯುಗಾದಿ ಮರೆತೆನೆಂದರೂ ಮರೆಯಲಾಗದಂತದ್ದು. ಬೇವು-ಬೆಲ್ಲಗಳನ್ನು ಹಂಚಿ ತಿನ್ನುವುದರ ಮುಖೇನ ಜೀವನ ಸಂದೇಶವನ್ನು ಹೊರಹಾಕುತ್ತೇವೆ. ಒಂದೇ ನಾಣ್ಯದ ಎರಡು ಮುಖಗಳಂತೆ ಪ್ರತಿಯೊಬ್ಬರ ಬದುಕಿನಲ್ಲಿ ಕಷ್ಟ-ಸುಖಗಳು, ನೋವು ನಲಿವುಗಳು, ಅಳುವು-ನಗುವುಗಳು ಸಾಮಾನ್ಯ ಎಂಬ ಅದ್ಭುತ ಸಂದೇಶ ಇದರಲ್ಲಡಗಿದೆ.

ಸುಖ-ದು:ಖಗಳ "ಸಮರಸವೇ ಜೀವನ". ಯುಗಾದಿ ವರ್ಷದ ಮೊದಲ ದಿನವಾಗಿ ಆಚರಿಸುತ್ತೇವೆ. ನೋವು ನಲಿವು ಎರಡಕ್ಕೂ ನಾವು ಸ್ವಾಗತ ನೀಡಬೇಕು. ನಾವು ಬೇವಿನ ಸಮಾನವಾದ ದು:ಖ, ಅಶಾಂತಿಯ, ಪ್ರಪಂಚದಲ್ಲಿದ್ದರೂ ಬೆಲ್ಲದ ಸಮಾನವಾದ ಶಾಂತಿ, ಅತೀಂದ್ರಿಯ ಸುಖ, ಆತ್ಮೀಯತೆ, ಸ್ನೇಹ, ಮಧುರತೆಯ ಅನುಭವ ಮಾಡುವುದು ಎಂಬ ನಿಜ ಅರ್ಥವಾಗಿದೆ. ನಮಗೆ ಸಾಮರಸ್ಯವನ್ನು ತರುವಂತಹದ್ದು. ಆದ್ದರಿಂದಲೇ ಜ್ಞಾನಪೀಠ ಪ್ರಶಸ್ತಿಯ ಪುರಸ್ಕೃತರು ಕನ್ನಡದ ವರಕವಿ ಡಾ. ದ.ರಾ. ಬೇಂದ್ರೆಯವರ ಯುಗಾದಿ ಬಗೆಗಿನ ಈ ಕವಿತೆ ಎಲ್ಲರ ನಾಲಿಗೆಯ ಮೇಲೆ ಪುಟಿದೇಳ್ತಾ ಇದೆ. "ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ" ಎಂಬ ಕವಿ ಬೇಂದ್ರೆಯವರ ಅಮೃತ ವಾಣಿಯಂತೆ ಹೊಸವರ್ಷ ಎಲ್ಲರ ಮನೆಯಲ್ಲಿ ಹರ್ಷದಾಯಕವಾಗಲಿ

ಪ್ರತಿಯೊಬ್ಬರ ಜೀವನದ ಜಗ್ಗಾಟದಲಿ, 21ನೇ ಶತಮಾನದ ಯಾಂತ್ರಿಕ ಬದುಕಿನಲಿ ಹಬ್ಬ, ಹರಿದಿನಗಳನ್ನು ಪಾಲಿಸುವುದು ಒಂದು ಹೊಸ ಚೈತನ್ಯ, ಹೊಸ ಹುರುಪು ತರುತ್ತದೆ. ಚಿಕ್ಕ ಮಕ್ಕಳಿಂದ ಹಿಡಿದು ವಯೋವೃದ್ಧರ ಮುಖದಲ್ಲಿ ಹೊಸ ಚೈತನ್ಯತರುವುದು ಈ ಯುಗಾದಿ ಹಬ್ಬ.

ಪ್ರಕೃತಿಯಲ್ಲಾಗುವ ಗಣನೀಯ ಪರಿವರ್ತನೆ ಹಾಗೂ ಬೇವು-ಬೆಲ್ಲಗಳ ಸಮ್ಮಿಶ್ರಣಗಳು ರೋಗನಿರೋಧಕ ಶಕ್ತಿಯ ವರ್ಧಕಗಳಾಗಿವೆ. ಬೇಸತ್ತ ಮನಸ್ಸುಗಳಿಗೆ ಪ್ರೀತಿಯ ಸಾಂತ್ವನ ಹಾಗೂ ಚೈತನ್ಯದ ಹೊಳೆಯನ್ನೇ ಯುಗಾದಿ ಹಬ್ಬ ಹರಿಸುತ್ತದೆ. ಸುರಕ್ಷಿತ ಅಂತರ ಹಾಗೂ ಸ್ವಚ್ಛತೆಯ ಸ್ವ ಅರಿವಿನೊಂದಿಗೆ ನೂತನ ವರ್ಷಾಚರಣೆಯ ಸವಿಯುಗಾದಿಯನ್ನು ಸಂಭ್ರಮಿಸೋಣ ಅಲ್ಲವೇ ಶುಭಕೃತನಾಮ ಸಂವತ್ಸರದ ಚಾಂದ್ರಮಾನ ಯುಗಾದಿಗೆ ತಮ್ಮೆಲ್ಲರಿಗೂ ಹಾರ್ದಿಕ ಶುಭಾಶಯಗಳು...

ಒಟ್ಟಾರೆಯಾಗಿ ಈ ಯುಗಾದಿ ಹಬ್ಬದಂದು ನಾಡಿನಾದ್ಯಂತ ಎಲ್ಲರಿಗೂ ಹೊಸ ಚೈತನ್ಯ, ಹೊಸ ಹುರುಪು, ಹೊಸ ಸಂತಸ, ಹೊಸ ಹೊಸ ವಿಚಾರಗಳು, ಶಾಂತಿ, ಸಮಾಧಾನಗಳು ಪ್ರೀತಿಯಿಂದ ತರಲಿ ಎಂದು ಶುಭ ಕೋರುತ್ತಾ ಸರ್ವರಿಗೂ ಯುಗ ಯುಗಾದಿಯ ಹಾರ್ದಿಕ ಶುಭಾಶಯಗಳು.

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 32
Licensed to post without Prepayment License No. PMG BG/WPP-384/2020-2022.



# ಯುಗಾದಿ ಹಬ್ಬದ ಮಹತ್ವ

– ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತ.

ಯುಗಾದಿ ಹಬ್ಬವನ್ನು ಚಾಂದ್ರಮಾನ ಮತ್ತು ಸೌರಮಾನ ರೀತಿಯಾಗಿ ಆಚರಿಸುವ ಎರಡು ಪದ್ಧತಿ ಇದೆ. ಈ ದಿನ ಪರಮಾತ್ಮನ ಸ್ಮರಣೆ ಮಾಡುತ್ತಾ, ಮನೆಯ ಮುಂಭಾಗದಲ್ಲಿ ರಂಗೋಲಿ, ತೋರಣಗಳಿಂದ ಸಿಂಗರಿಸಿ, ಅಭ್ಯಂಜನ ಮಾಡಿ, ಹೊಸ ವರ್ಷದ ಪಂಚಾಂಗವನ್ನು ದೇವರ ಸಮೀಪವಿಟ್ಟು, ಕುಲದೇವತೆ ಪೂಜೆ ಮಾಡಿ, ಅನಂತರ ದೈವಜ್ಞರು ಪಠಣ ಮಾಡುವ ಪಂಚಾಂಗ ಶ್ರವಣವನ್ನು ಆಲಿಸಬೇಕು.

ಯುಗಾದಿ ಅಥವಾ ಉಗಾದಿ ಚೈತ್ರ ಮಾಸದ ಮೊದಲ ದಿನ. ಭಾರತದ ಅನೇಕ ಕಡೆಗಳಲ್ಲಿ ಈ ದಿನ ಹೊಸ ವರ್ಷದ ಮೊದಲ ದಿನ. ಹೊಸ ವರ್ಷದ ಹಬ್ಬವಾಗಿ ಯುಗಾದಿಯನ್ನು ಆಚರಿಸಲಾಗುತ್ತದೆ. "ಯುಗಾದಿ" ಪದದ ವ್ಯುತ್ಪತ್ತಿ "ಯುಗ+ಆದಿ" – ಹೊಸ ಯುಗದ ಆರಂಭ ಎನ್ನುತ್ತಾರೆ.

ಯುಗಾದಿಯೆಂದರೆ ಹೊಸವರ್ಷದ ಆರಂಭದ ದಿನವಾದರೂ ಭಾರತದಲ್ಲಿ ಈ ದಿನವನ್ನು ಆಚರಿಸುವ ರೀತಿ ಹಲವಾರಿವೆ. ಹೊಸ ವರ್ಷವನ್ನು ಸ್ವಾಗತಿಸಲು ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ, ಈ ಹಬ್ಬ ನಮ್ಮ ಜೀವನದಲ್ಲಿ ಸಮೃದ್ಧಿ, ಸುಖ ಮತ್ತು ಸಂತೋಷವನ್ನು ತರುತ್ತದೆ. ಇದಲ್ಲದೆ, ಬೇವು ಬೆಲ್ಲ ಮಾನವ ಜೀವನದ 6 ಮಹತ್ವಗಳನ್ನು ಸೂಚಿಸುತ್ತದೆ, ಇದು ಮಾನವ ಜೀವನಕ್ಕೆ ಬೇಕಾದ ಪ್ರಮುಖ ಮಾರ್ಗದರ್ಶನಗಳನ್ನು ನೀಡುತ್ತದೆ ಎಂದು ನಂಬಲಾಗಿದೆ. ಯುಗಾದಿಯಲ್ಲಿ ಬೆಲ್ಲ ಮತ್ತು ಬೇವು ಏನನ್ನು ಸೂಚಿಸುತ್ತವೆ ಎಂಬುದನ್ನು ನೋಡೋಣ. 6 ರುಚಿ – 6 ಭಾವನೆಗಳು ಬೇವು ಬೆಲ್ಲದಲ್ಲಿ ಬೆರೆಸುವ 6 ಪದಾರ್ಥಗಳು ವಿಭಿನ್ನ ರುಚಿಗಳನ್ನು ಹೊಂದಿವೆ. ಈ ಪ್ರತಿಯೊಂದು ರುಚಿ ನಿಮ್ಮ ಜೀವನದ ಏರಿಳಿತವನ್ನು ಸಂಕೇತಿಸುತ್ತವೆ. ಈ ಸಂದರ್ಭವು ನಿಮಗೆ ಹೊಸ ದಿನಗಳನ್ನು ತರಬಹುದು ಎಂದು ಇದು ಸೂಚಿಸುತ್ತದೆ. ಮಾನವ ಜೀವನವು ಎಲ್ಲಾ ರೀತಿಯ ಭಾವನೆಗಳಿಂದ ತುಂಬಿದೆ, ಅದು ನಮಗೆ ಜೀವನದಲ್ಲಿ ಸರಿಯಾದ ಮಾರ್ಗವನ್ನು ತೋರಿಸುತ್ತದೆ.

**ಬೇವಿನ ಮಹತ್ವ :** ಬೇವು ಬದುಕಿನ ಕಹಿಯನ್ನು ಸೂಚಿಸುತ್ತದೆ. ನಮ್ಮ ಜೀವನವು ಯಾವಾಗಲೂ ಸಂತೋಷದ ಕ್ಷಣಗಳಿಂದ ತುಂಬಿರಲು ಸಾಧ್ಯವಿಲ್ಲ. ನಮ್ಮ ಸುತ್ತಲಿನ ಜೀವನದ ಕಹಿಗಳನ್ನು ನಾವು ಒಪ್ಪಿಕೊಂಡು ಜೀವನ ಸಾಗಿಸಬೇಕು.

**ಬೆಲ್ಲದ ಮಹತ್ವ :** ಖಂಡಿತವಾಗಿಯೂ ಯುಗಾದಿಯ ಬೇವು ಬೆಲ್ಲದಲ್ಲಿ ಪ್ರಮುಖ ಮಹತ್ವದ್ದಾಗಿದೆ. ನಿಮ್ಮ ಜೀವನದಲ್ಲಿ ಏನೇ ಬಂದರೂ, ನಗು ಮುಖದಿಂದ ಎಲ್ಲವನ್ನೂ ಒಪ್ಪಿಕೊಂಡರೆ, ಸಮಸ್ಯೆಗಳು ಸುಲಭವಾಗಿ ಕಾಣುತ್ತವೆ. ನಗು ಮೊಗವು ಬೆಲ್ಲವನ್ನು ಸೂಚಿಸುತ್ತದೆ.

**ಮೆಣಸಿನ ಮಹತ್ವ :** ಎಲ್ಲರಿಗೂ ಕೋಪ ಬರುವುದು ಸಹಜ. ಕೆಲವರು ಅದನ್ನು ನಿಯಂತ್ರಣ ಮಾಡಿಕೊಳ್ಳುತ್ತಾರೆ ಅದರೆ ಇನ್ನೂ ಕೆಲವರು ಆ ಭಾವನೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ಈ ಯುಗಾದಿಗೆ ನಿಮ್ಮ ಕೋಪವನ್ನು ಮೆಣಸಿನ ಹಾಗೆ ನುಂಗಿ ಹೊಸ ಜೀವನವನ್ನು ಆರಂಭಿಸಿ.

**ಉಪ್ಪಿನ ಮಹತ್ವ :** ಯುಗಾದಿಯ ಬೇವು ಬೆಲ್ಲದ ಇತರೆ ಪದಾರ್ಥಗಳಾದ ಉಪ್ಪು ಭಯವನ್ನು ಸಂಕೇತಿಸುತ್ತದೆ ಎಂದು ನಿಮಗೆ ತಿಳಿದಿದೆಯೇ? ಹೌದು, ತಪ್ಪುಗಳನ್ನು ಮಾಡದಂತೆ ತಡೆಯುವ ಈ ಭಯವೇ ನೀವು ಹೊಸ ಕೆಲಸವನ್ನು ಮಾಡದಂತೆಯೂ ತಡೆಯುತ್ತದೆ.

**ಹುಣಿಸೇಹಣ್ಣಿನ ಮಹತ್ವ :** ಹುಣಸೆಹಣ್ಣಿನ ಹುಳಿ ರುಚಿ ನಿಮ್ಮ ಜೀವನದಲ್ಲಿನ ಅಸಮಾಧಾನವನ್ನು ಸಂಕೇತಿಸುತ್ತದೆ. ಅದನ್ನು ಹೇಗೆ ನಿಯಂತ್ರಿಸಬೇಕೆಂದು ನಿಮಗೆ ತಿಳಿದಿದ್ದರೆ, ನಿಮ್ಮ ಜೀವನದಲ್ಲಿನ ಗುರಿಗಳನ್ನು ಸುಲಭವಾಗಿ ಸಾಧಿಸಬಹುದು.

**ಮಾವಿನ ಮಹತ್ವ :** ಇದು ಯುಗಾದಿ ಬೇವು ಬೆಲ್ಲದ ಕೊನೆಯ ಹಾಗು ಪ್ರಮುಖವಾದ ಪದಾರ್ಥ. ನಾವು ಎಲ್ಲಾ ರೀತಿಯ ಭಾವನಾತ್ಮಕ ಹಂತಗಳನ್ನು ದಾಟಿ ಹೋಗಬಹುದು, ಆದರೆ ಜೀವನದಲ್ಲಿ ಅಚ್ಚರಿ ಮೂಡಿಸುವ ಸಂಗತಿಗಳು ಇಲ್ಲದಿದ್ದರೆ, ಬದುಕು ಬೇಸರ ಹುಟ್ಟಿಸುತ್ತದೆ. ಮಾವಿನ ಕಾಯಿಯ ಈ ಹುಳಿ ಅಚ್ಚರಿಗಳನ್ನು ತಂದೊಡ್ಡುವ ಮೂಲಕ ನೀವು ಜೀವನದಲ್ಲಿ ಹೊಸತನವನ್ನು ಕಲಿಯಲು ಪ್ರೇರಣೆ ನೀಡುತ್ತದೆ.

ಈ 6 ಮಹತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಪ್ರತಿ ವರ್ಷವೂ ಎಲ್ಲರಿಗೂ ಹೊಸ ತಾಗುತ್ತದೆ. ಮನುಷ್ಯ ಮಾತ್ರ ತನ್ನ ಜಂಜಡದಲ್ಲಿ ಮುಳುಗಿ ಹೋಗಿ ನವೋಲ್ಲಾಸದಿಂದ ವಂಚಿತನಾಗಿದ್ದಾನೆ. ಅದಕ್ಕಾಗಿ ನಾವು ಪ್ರಕೃತಿಯನ್ನೇ ಮಾದರಿಯಾಗಿಟ್ಟುಕೊಂಡು ಬದುಕಿಗೆ ಹೊಸ ಉಲ್ಲಾಸವನ್ನು ಹೊಸ ಚೈತನ್ಯವನ್ನು ಆವಾಹಿಸಿಕೊಳ್ಳಬೇಕು. ಹೊಸ ನಿರ್ಧಾರಗಳನ್ನು ಕೈಗೊಂಡು ಮುನ್ನಡೆವುಯುವುದರೊಂದಿಗೆ ಈ ಯುಗಾದಿ ಹಬ್ಬವನ್ನು ಆಚರಿಸೋಣ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010